# ಕರ್ತನಿಗಾಗಿ ಸಕಲವನ್ನು ಅಪಾಯಕ್ಕೆ ಗುರಿ ಮಾಡಿಕೊಳ್ಳುವದು

## (21:1-17)

ಅನೇಕಸಾರಿ ನಾನು ಬೋಧಿಸುವಾಗ, ಭವಿಷ್ಯವನ್ನು ನೋಡುವ ಕುರಿತು ತಿಳಿಸಿರುತ್ತೇನೆ; ಆದರೆ ಅದರ ಪ್ರತಿಬಿಂಬದಲ್ಲಿ; ಅಂತಹ ಸಾಮರ್ಥ್ಯವು ಜವಾಬ್ದಾರಿಗಳಂತಲೂ ಸಾಲ ತೀರಿಸುವ ಸ್ವತ್ತಾಗಿರುತ್ತದೆ. ನನ್ನ ಭವಿಷ್ಯದಲ್ಲಿ ಬರಬಹುದಾದ ಸಕಲ ಅಘಾತಗಳ ಕುರಿತು, ನಾನು ಮುಂದಾಗಿಯೇ ಅರಿಯುವವನಾದರೆ? ಅದರಿಂದ ನನ್ನ ವರ್ತಮಾನದ ಆನಂದಕ್ಕೆ ಉಂಟಾಗಬಹುದಾದ ಅಡ್ಡಿಯನ್ನು ತಡೆಯಿಡಿಯಲು ಸಾಧ್ಯವಾಗುವದಿಲ್ಲ.

ಪೌಲನು ಯೆರೂಸಲೇಮಿನ ಕಡೆಗೆ ಪ್ರಯಾಣಿಸುವಾಗ, ಅಲ್ಲಿ ಅವನ ಭವಿಷ್ಯಕ್ಕೆ ಉಂಟಾಗಬಹುದಾದ ವಿಷಯವನ್ನು ಈಗಾಗಲೇ ಅರಿತವನಾಗಿದ್ದನು: ಮೂರನೆಯ ಈ ಪ್ರಯಾಣದ ಅಂತ್ಯದಲ್ಲಿ, ಅವನಿಗೆ ಹಿಂಸೆಯ ಸೂಚನೆಗಳು ಉಂಟಾಗಿದ್ದವು! ಅವನು ರೋಮಾಯದಲ್ಲಿದ್ದುಕೊಂಡು, ಕೊರಿಂಥದವರಿಗೆ ಬರೆಯುವಾಗ, ಅವನು ತನ್ನ ಯೆರೂಸಲೇಮಿನ ಪ್ರಯಾಣದ ಕುರಿತು ಈ ಮನವಿಯನ್ನು ಸಲ್ಲಿಸಿ: "ದೇವರು ನನ್ನನ್ನು ಯೂದಾಯದಲ್ಲಿರುವ, ... ಅವಿಧೇಯರ ಕೈಗೆ ತಪ್ಪಿಸಬೇಕೆಂತಲೂ, ಸಹೋದರರೇ, ದೇವರ ಮುಂದೆ ಮಾಡುವ ಪ್ರಾರ್ಥನೆಗಳಲ್ಲಿ ನನ್ನೊಂದಿಗೆ ಬಲೀಯವಾಗಿ ವಿಜ್ಞಾಪಿಸಿಕೊಳ್ಳಬೇಕೆಂದು ನಿಮ್ಮನ್ನು ಬೇಡಿಕೊಳ್ಳುತ್ತೇನೆ ಅಂದನು" (ರೋಮಾ ಪುರ 15:30, 31ಙ). ಅವನು ಮಿಲೇತಿಯಲ್ಲಿ, ಹಿರಿಯರಿಂದ ಬೀಳ್ಕೊಂಡಾಗ:

> ಇದೆಲ್ಲಾ ನಿಮಗೇ ತಿಳಿದಿದೆ. ಇಗೋ, ನಾನು ಈಗ ಆತ್ಮನಿರ್ಬಂಧವುಳ್ಳವನಾಗಿ ಯೆರೂಸಲೇಮಿಗೆ ಹೋಗುತ್ತೇನೆ. ಅಲ್ಲಿ ನನಗೆ ಏನು ಸಂಭವಿಸುವದೋ ನಾನರಿಯೆ. ನಿನಗೆ ಬೇಡಿಗಳೂ ಸಂಕಟಗಳೂ ಕಾದುಕೊಂಡವೆ ಎಂದು ಪವಿತ್ರಾತ್ಮನು ಎಲ್ಲಾ ಪಟ್ಟಣಗಳಲ್ಲಿಯೂ ನನಗೆ ಖಂಡಿತವಾಗಿ ಹೇಳುತ್ತಾನೆ ಇಷ್ಟು ಮಾತ್ರ ಬಲ್ಲೆನು (ಅಪೊಸ್ತಲರ ಕೃತ್ಯಗಳು 20:22, 23).

ಯೆರೂಸಲೇಮಿನಲ್ಲಿ ಅವನು ಭೇಡಿ ಹಾಕಲ್ಪಟ್ಟು, ಮರಣವನ್ನು ಅನುಭವಿಸುದಕ್ಕೂ ಸಿದ್ಧನಾಗಿದ್ದನು ಎಂದು ಪೌಲನು ತಿಳಿಸಿದನು (21:13). ಆದಾಗ್ಯೂ, ಅವನು ಅಲ್ಲಿಗೆ ಏಕೆ ಹೋದನು? ಅವನು ಅಲ್ಲಿಗೆ ಹೋಗುವದು ಕರ್ತನ ಚಿತ್ತವಾಗಿತ್ತು ಎಂಬುದನ್ನು ಮನವರಿಕೆ ಮಾಡಿಕೊಂಡಿದ್ದನು (19:21; 20:22[1]) - ಅವನು ಕರ್ತನಿಗಾಗಿ ಸಕಲವನ್ನು ಅಪಾಯಕ್ಕೆ ಗುರಿಮಾಡಿಕೊಳ್ಳುವದಕ್ಕೆ ಸಿದ್ಧನಾಗಿದ್ದನು.

ಈ ಪಾಠದಲ್ಲಿ, ಪೌಲನ ಪ್ರಯಾಣದ ಅಂತ್ಯವನ್ನು ಹಾಗೂ ಯೆರೂಸಲೇಮಿಗೆ ಸಮೀಪನಾಗುವಾಗ ಉಂಟಾದ ಘರ್ಷಣೆಯನ್ನು ಗಮನಿಸುತ್ತೇವೆ. ಈ ಅಧ್ಯಯನದಲ್ಲಿ, ಪೌಲನು ಸಕಲ ವಿಧವಾಗಿ ಸಂಕಷ್ಟಕ್ಕೆ ತನ್ನನ್ನು ಗುರಿ ಮಾಡಿಕೊಂಡನು - ಮತ್ತು ನಾವುಗಳು ಏಕೆ ಆ ರೀತಿಯಾಗಿ ಆಗಬಾರದು ಎಂಬುದನ್ನು ತಿಳಿದುಕೊಳ್ಳೋಣ.

## ಸಮುದ್ರ ಪ್ರಯಾಣ (21:1-3)

ನಮ್ಮ ಹಿಂದಿನ ಪಾಠದಲ್ಲಿ, ಎಫೆಸದ ಹಿರಿಯರನ್ನು ಕಣ್ಣೀರಿನಿಂದ ಬೀಳ್ಕೊಟ್ಟ ಸನ್ನಿವೇಶದಲ್ಲಿ ಅಂತ್ಯಗೊಳಿಸಿದ್ದೆವು. ಅದ್ಯಾಯ 21ರಲ್ಲಿ, "ನಾವು ಪ್ರಯಾಸದಿಂದ ಅವರನ್ನು ಬಿಟ್ಟು ಹಡಗನ್ನು ಹತ್ತಿದ ಮೇಲೆ" (ವಚನ 1ಎ) ಎಂದು ಆರಂಭವಾಗುತ್ತದೆ. ಗ್ರೀಕ್‌ನಲ್ಲಿ, ಅಕ್ಷರಶಃ "ನಾವು ಅವರಿಂದ ಹರಿದುಕೊಂಡ ನಂತರ, ಹಡಗನ್ನು ಹತ್ತಿದೆವು" ಎಂಬುದಾಗಿದೆ (ನೋಡಿರಿ NIV).[2]

ಲೂಕನು ಸಹ ಪೌಲನೊಂದಿಗೆ ಪ್ರಯಾಣಿಸುತ್ತಿದ್ದರಿಂದ, ಪ್ರಯಾಣದ ವಿವರದ ಸಾಕ್ಷ್ಯಾಧ್ಧಾರಗಳನ್ನು ದಾಖಲು ಮಾಡಿದ್ದನು. "ನಾವು ನೆಟ್ಟಗೆ ಹೋಗಿ ಕೋಸ್ ದ್ವೀಪಕ್ಕೆ ಸೇರಿದೆವು. ಮರುದಿನ ರೋದಕ್ಕೆ ಹೋಗಿ ಅಲ್ಲಿಂದ ಪತರಕ್ಕೆ ಬಂದೆವು"[3] (ವಚನ 1ಎ). ಮೊದಲ ಎರಡು ನಿಲುಗಡೆಯ ಕುರಿತಾಗಿ ಲೂಕನು ವಿಸ್ತಾರವಾದ ವಿವರಣೆಯನ್ನು ನೀಡಬಹುದಿತ್ತು. ಕೋಸ್ ದ್ವೀಪವು ಕಪಟಿಗಳ ಹಾಗೂ ಪ್ರಖ್ಯಾತವಾದ ವೈದ್ಯಕೀಯ ಶಾಲೆಯ ಹುಟ್ಟು ಸ್ಥಳವಾಗಿತ್ತು. ರೋಧೆ ದ್ವೀಪವು ಗುಲಾಬಿ ಹೂವುಗಳನ್ನು ಬೆಳೆಯುವ ಪ್ರಖ್ಯಾತವಾದ ಪ್ರದೇಶವಾಗಿತ್ತು (ಆ ಹೆಸರು ಇಲ್ಲಿಯೇ ಉತ್ಪತ್ತಿಯಾಯಿತು). ಹಾಗೂ 105 ಅಡಿ ಉದ್ದದ ಕಂಚಿನ ಬೃಹದಾಕಾರದ ಪ್ರಪಂಚದಲ್ಲಿ ಏಳು ಅದ್ಭುತಗಳಲ್ಲಿ ಇದೂ ಒಂದಾಗಿದೆ.[4] ಆದರೆ ಲೂಕನು ಪ್ರವಾ ಸಿಗಳಿಗೆ ಅನುಕಾಲವಾಗುವ ನಕ್ಷೆಯನ್ನು ದಾಖಲಿಸುತ್ತಿರುವದಿಲ್ಲ. ಪೌಲನು ಅವಸರ ವಾಗಿ ಯೆರೂಸಲೇಮಿಗೆ ಹೋಗಿ, ಪಂಚಾಶತ್ತಮದಿನದಲ್ಲಿ ಅಲ್ಲಿ ಇರಬೇಕೆಂಬದನ್ನು ತಿಳಿಸುತ್ತಿರುವನು (20:16[5]).

ಒಂದು ವೇಳೆ ಪೌಲನು, ಪ್ರತಿ ಪಟ್ಟಣಗಳಲ್ಲಿ ನಿಂತು ಹೊರಡುವ ಹಡಗಿನಲ್ಲಿ ಪ್ರಯಾಣಿಸಿದ್ದರೆ, ಅವರೆಲ್ಲರು ಯೆರೂಸಲೇಮನ್ನು ಸರಿಯಾದ ಸಮಯಕ್ಕೆ ತಲುಪಲು, ಸಾಧ್ಯವಾಗುತ್ತಿರಲಿಲ್ಲ. ಅವರು ಪತರದಿಂದ, ಫೊಯಿನಿಕೆಗೆ ಹೋಗುವ ಹಡಗನ್ನು ಕಂಡು ಹತ್ತಿ ಪ್ರಯಾಣವನ್ನು ಸಾಗಿಸಿದರು.[6] ಫೊಯಿನಿಕೆಯು ಮೆಡಿಟರೇನಿಯನ್ ಸಮುದ್ರದ ಪೂರ್ವಕ್ಕೂ ಮತ್ತು ಪಾಲಿಸ್ತೇನಿನ ಉತ್ತರದ ದಿಕ್ಕಿನಲ್ಲಿ ಸ್ಥಾಪನೆಗೊಂಡಿತ್ತು,[7] ಅದು ಯೆರೂಸಲೇಮಿಗೆ ಸುಗಮ ಪ್ರಯಾಣವಾಗಿತ್ತು. ಆದ್ದರಿಂದ ಲೂಕನು, "ಅವರು ಫೂಯಿನೀಕೆಗೆ, ಹೋಗುವ ಹಡಗನ್ನು ಕಂಡು ಹತ್ತಿ ಪ್ರಯಾಣ ಸಾಗಿಸಿದರು" ಎಂದು ದಾಖಲು ಮಾಡಿರುವನು (ವಚನ 2).

ಅವರು ಈ ಹಿಂದೆ ಕಷ್ಟಕರವಾದ ಪ್ರಯಾಣಗಳನ್ನು ಮಾಡಿದಂತೆ, ಈ ಹಡಗು ಸಹ ಮೆಡಿಟರೇನಿಯನ್ ಸಮುದ್ರದಲ್ಲಿ ಪ್ರಯಾಣ ಮಾಡಿ ನೇರವಾಗಿ ಫೂಯಿನೀಕೆಗೆ[8] ಹೋಯಿತು. ಆ ಪ್ರಯಾಣದ ಮಧ್ಯದಲ್ಲಿ, ಕುಪ್ರ ದ್ವೀಪವನ್ನು ಕಂಡು ಅದನ್ನು ಎಡಗಡೆಗೆ ಬಿಟ್ಟು ಹೋದರು (ವಚನ 3ಎ), ಈ ಸ್ಥಳದಲ್ಲಿಯೇ ಪೌಲ ಬಾರ್ನಬರು ಹತ್ತು ವರ್ಷಗಳ ಹಿಂದೆ ಮೊದಲ ಸೇವಾ ಪ್ರಯಾಣವನ್ನು ಆರಂಭಮಾಡಿದ್ದರು (13:4) ಹೇಗೂ ಆ ಹಡಗು ಆ ದ್ವೀಪದಲ್ಲಿ ನಿಲ್ಲಿಸದೆ, "ತೂರ್ ಪಟ್ಟಣಕ್ಕೆ ಸೇರಿದರು" (21:3ಬಿ) ಯಾಕಂದರೆ "ಅಲ್ಲಿ ಸರಕನ್ನು ಇಳಿಸಬೇಕಾಗಿತ್ತು" (ವಚನ 3ಸಿ).

## ತೂರ್ ಪಟ್ಟಣದಲ್ಲಿ ಪರೀಕ್ಷೆಗೊಳಗಾದರು (21:4-6)

ತೂರ್ ಪಟ್ಟಣವು ಫೂಯಿನೀಕೆಯ ಪ್ರಧಾನ ನಗರವಾಗಿತ್ತು, ಪುರಾತನ ಪಟ್ಟಣ ವಾಗಿದ್ದು ಲೌಕೀಕ ಹಾಗೂ ಸತ್ಯವೇದದ ಇತಿಹಾಸ ವಿದ್ಯಾರ್ಥಿಗಳ ಚರಿತ್ರಾ ಪಟ್ಟಣವೂ ಆಗಿತ್ತು ತೂರಿನ ಅರಸನಾದ ಹೀರಾಮನು ಸೊಲೊಮೋನನಿಗೆ ಬೇಕಾದಷ್ಟು ದೇವದಾರಿನ ಮರಗಳನ್ನು ನೀಡುತ್ತಿದ್ದನು (1 ಅರಸು 5:10).[9] ತೂರಿನ ವಿಷಯವಾಗಿ ಯೇಸು ಸಹ ಉಲ್ಲೇಖಿಸಿರುವನು (ಮತ್ತಾಯ 11:21) ಆತನು ತೂರಿನ ಪ್ರದೇಶಗಳಲ್ಲಿ ಸಂಚಾರವನ್ನು ಕೂಡ ಮಾಡಿದ್ದನು (ಮತ್ತಾಯ 15:21; ಮಾರ್ಕ 7:24).

ಯೆರೂಸಲೇಮಿನ ಕ್ರೈಸ್ತರಿಗೆ, ಪೌಲನಿಂದ ಹಿಂಸೆ ಉಂಟಾಗಿ ಅವರುಗಳು ಚದರಿಹೋದಾಗ (ಅಪೊಸ್ತಲರ ಕೃತ್ಯಗಳು 8:1-4), ಅವರಲ್ಲಿ ಕೆಲವರು ಫೂಯಿನೀಕೆಗೂ ಹೋಗಿದ್ದರು (11:19). ಪ್ರಾಯಶಃ ಆ ಸಮಯದಲ್ಲಿಯೇ, ತೂರಿನ ಸಭೆಯು ಸ್ಥಾಪನೆಯಾಗಿರಬಹುದು. ಕೆಲವಾರು ವರ್ಷಗಳ ನಂತರದಲ್ಲಿ, ಸಿರಿಯದ ಅಂತಿಯೋಕ್ಯದಿಂದ ಯೆರೂಸಲೇಮಿಗೆ ಹಿಂದಿರುಗುವಾಗ, ಪೌಲನು ಫೂಯಿನೀಕೆಯನ್ನು ಹಾದು ಬಂದಿದ್ದನು. "ಮತ್ತು ಅನ್ಯಜನರು ಕರ್ತನ ಕಡೆಗೆ ತಿರಿಗಿಕೊಂಡ ಸಂಗತಿಯನ್ನು ಅಲ್ಲಿದ್ದ ಸಹೋದರರಿಗೆ ವಿವರವಾಗಿ ಹೇಳಿ ಅವರೆಲ್ಲರನ್ನು ... ಬಹಳವಾಗಿ ಸಂತೋಷ ಪಡಿಸಿದ್ದನು" (15:3ಬಿ). ಪ್ರಾಯಶಃ ಪೌಲನು ಆ ಸಮಯದಲ್ಲಿ ಅಲ್ಲಿದ್ದ ಕೆಲವು ಸಹೋದರರರನ್ನು ಸಂಧಿಸಿರಬಹುದು.[10]

ಪೌಲನು ಪ್ರಯಾಣಿಸುತ್ತಿದ್ದ ಹಡಗು ಸುಕ್ಷೇಮವಾಗಿ ಮೆಡಿಟೇರಿಯನ್ ಸಮುದ್ರದ ಪ್ರಯಾಣವನ್ನು ಮಾಡಿತ್ತು (ಜಾನ್ ಕ್ರಿಸೋಸ್‌ಟಮ್ ಪ್ರಕಾರ, ಐದು ದಿವಸಗಳ ಪ್ರಯಾಣ). ಪಂಚಾಶತ್ತಮ ದಿನದಂದು ಯೆರೂಸಲೇಮಿನಲ್ಲಿ ಇರಬೇಕೆಂಬ ದೃಢ ನಿರ್ಣಯವು ಇರುವಾಗಲೇ, ಅವನು ಅಲ್ಪ ಸಮವನ್ನು ಹೊಂದಿದ್ದನು.[11] ಆಗ ಹಡಗು ತೂರಿನಲ್ಲಿ ತನ್ನ ಸರಕನ್ನು ಇಳಿಸಲು ಕೆಲವು ದಿವಸಗಳ ಸಮಯವೇ ಬೇಕಾಗಿತ್ತು, ಆದಾಗ್ಯೂ ಅವನು ಚಿಂತಿಸಲಿಲ್ಲ. ಆ ಪಟ್ಟಣದಲ್ಲಿದ್ದ ಸಹೋದರರ ಅನ್ಯೋನ್ಯತೆಯು ಆಳವಾಗಿ ವೃದ್ಧಿಯಾಗುವಂತೆ ಪ್ರಯತ್ನಿಸಿದನು. ಅದರ ಕುರಿತು ಲೂಕನು ಬರೆದು, "ಅಲ್ಲಿ ಶಿಷ್ಯರನ್ನು ಹುಡುಕಿಕೊಂಡು[12] ಏಳು ದಿವಸ ನಿಂತೆವು" (21:4ಎ).

ಈ ಹಿಂದೆ, ಪೌಲನು ಅನ್ಯಜನರು ದೇವರ ಕಡೆಗೆ ತಿರುಗಿಕೊಂಡ ಕುರಿತು, ಆ ಸಹೋದರರನ್ನು ಸಂತೋಷಪಡಿಸಿದ್ದನು; ಈಗ ಅವನು ಅವರ ಇತ್ತೀಚಿನ ವರ್ತಮಾನವನ್ನು ವರದಿ ಮಾಡಿದನು. ಅಲ್ಲಿ ಅವರು ವಾರದ ಮೊದಲನೆಯ ದಿನದಲ್ಲಿ, ರೊಟ್ಟಿ ಮುರಿದು ಅನ್ಯೋನ್ಯತೆಯ ಶಿಖರವನ್ನು ಏರಿದ್ದರು.[13]

ಆದರೆ ಒಂದು ಬೇಸರದ ಸಂಗತಿಯು ಅವರನ್ನು ಚಿಂತೆಗೀಡುಮಾಡಿತ್ತು: "ಅವರು ಆತ್ಮನ ಪ್ರೇರಣೆಯಿಂದ ಪೌಲನಿಗೆ ನೀನು ಯೆರೂಸಲೇಮಿಗೆ ಕಾಲಿಡಬೇಡವೆಂದು ಹೇಳಿದರು" (ವಚನ 4ಬಿ). ಸಹಜವಾಗಿ, "ಅಲ್ಲಿ ಒಬ್ಬ ಅಥವಾ ಇಬ್ಬರು ಪ್ರವಾದನಾ ವರವನ್ನು ಹೊಂದಿದ್ದ ಸಹೋದರರು, ಪೌಲನಿಗೆ ಯೆರೂಸಲೇಮಿನಲ್ಲಿ ಸಂಭವಿಸಬಹುದಾದ ಅಪಾಯದ ಕುರಿತು ಮುನ್ಸೂಚನೆಯನ್ನು ನೀಡಿದ್ದರು" (ನೋಡಿರಿ 20:3, 21:10, 11).

ಒಂದು ವೇಳೆ ನಾನು ಪೌಲನ ಸ್ಥಾನದಲ್ಲಿದಿದ್ದರೆ, ಭವಿಷ್ಯವನ್ನು ಚಿಂತಿಸದೆ ಆ ಸಹೋದರ ಅನ್ಯೋನ್ಯತೆಯಲ್ಲಿಯೇ ಮುಂದುವರಿಯುವ ಸಾಧ್ಯತೆಯಿತ್ತು, ಆದರೆ ಆತ್ಮನು ಅವನಿಗೆ ಈ ವಿಧವಾದ ಯೋಚನೆಯನ್ನು ತರಲಿಲ್ಲ. "ನಿನಗೆ ಬೇಡಿಗಳು ಸಂಕಟಗಳು ಕಾದುಕೊಂಡವೆ" ಎಂದು ಪವಿತ್ರಾತ್ಮನು ಎಲ್ಲಾ ಪಟ್ಟಣಗಳಲ್ಲಿಯೂ ನನಗೆ ಖಂಡಿತವಾಗಿ ಹೇಳುತ್ತಾನೆ (20:23). ಅವನ ಸೇವಾ ಪ್ರಯಾಣದಲ್ಲಿ, ಕಷ್ಟ ಸಂಕಟಗಳ ನಡುವೆ ಮುಂದುವರಿಯುವದ ಎಂಥಾ ಕಷ್ಟಕರವಾದ ಸಂಗತಿಯಾಗಿತ್ತಲ್ಲವೇ!

ತೂರ್ ಸಹೋದರರಿಂದ ಪೌಲನಿಗೆ ಉಂಟಾದ ಎಚ್ಚರಿಕೆಯ ಮಾತನ್ನು ಗಮನಿಸಿರಿ. "ನೀನು ಯೆರೂಸಲೇಮಿನಲ್ಲಿ ಕಾಲಿಡಬೇಡವೆಂದು ಹೇಳಿದರು." ಈ ನಿಷೇದವು ಪವಿತ್ರಾತ್ಮನಿಂದ ಬಂದ ಆಲೋಚನೆ ಎಂಬದರಲ್ಲಿ ನನಗೆ ಸಂಶಯವಿದೆ - ಅದರಲ್ಲಿ ಎರಡು ಕಾರಣಗಳಿರಬಹುದು: (1) ಪೌಲನಿಗೆ ಯಾವಾಗಲು ಆತ್ಮದಿಂದ ನಿಷೇದ ಉಂಟಾಗಬೇಕಿತ್ತು (16:6-8). ಆತ್ಮನು ಅವರಿಗೆ ನೀನು ಯೆರೂಸಲೇಮಿಗೆ ಹೋಗಬಾರದು, ಎಂದು ಸರಳವಾಗಿ ತಿಳಿಸಿದ್ದರೆ ಪೌಲನು ಆ ಸಲಹೆಗಳಿಗೆ ಮಾನ್ಯತೆ ನೀಡಬಹುದಿತ್ತು. (2) ಅವನು ಯೆರೂಸಲೇಮಿಗೆ[14] ಹೋಗುವದು, ದೈವೀಕವಾದ ಅರ್ಜಿಯಾಗಿತ್ತು ಎಂಬದು ಪೌಲನ ಸಹಜವಾದ ನಿರ್ಣಯವಾಗಿತ್ತು, ಹಾಗಿದ್ದರೆ ಆತ್ಮನು ವ್ಯತಿರಿಕ್ತವಾದದ್ದನ್ನು ಮಾಡುವದಿಲ್ಲ. ಒಂದು ವೇಳೆ, ಪೌಲನಿಗೆ ಯೆರೂಸಲೇಮಿನಲ್ಲಿ ಸಂಭವಿಸಬಹುದಾದ ಬೇಡಿ ಮತ್ತು ಸಂಕಟಗಳ ಕುರಿತು

ಪರಿಶುದ್ಧಾತ್ಮನು ಸಹೋದರರಿಗೆ ಪ್ರಕಟಿಸಿರಬಹುದು ಎಂಬುದು ನನ್ನ ಊಹೇ, ಆದ್ದರಿಂದ ಅವನು *ಅಲ್ಲಿಗೆ* ಹೋಗಬಾರದೆಂಬದು ಅವರ ನಿರ್ಣಯವಾಗಿತ್ತು.[15] ಆತ್ಮನ ಎಚ್ಚರಿಕೆಯು ನಿಷೇದದ ಕುರಿತಾಗಿರದೇ, ಸಿದ್ಧತೆಯ ಎಚ್ಚರಿಕೆಯಾಗಿತ್ತು - ಯೆರೂಸಲೇಮಿನಲ್ಲಿ *ಸಂಭವಿಸುವದಕ್ಕಿದ್ದ* ಸಂಕಟಗಳನ್ನು ಅನುಭವಿಸಲು ಸಿದ್ಧತೆಯಾಗಿತ್ತು.

ತೂರ್‌ನಲ್ಲಿ ಒಂದು ವಾರಗಳ ಕಾಲ ಬೇಗನೆ ತೀರಿಹೋಯಿತು. ಅಲ್ಲಿ ಅವನು ಅಲ್ಪಕಾಲ ಸಹೋದರ ಅನ್ಯೋನ್ಯತೆಯ ಆನಂದದಲ್ಲಿ ಸಮಯವನ್ನು ಕಳೆದ ನಂತರ, ಆ ಸ್ನೇಹದಿಂದ ಬೇರ್ಪಟ್ಟು ಮುಂದೆ ಹೋದನು. ಕರ್ತನ ಕುಟುಂಬದಲ್ಲಿ ಯಾವಾಗಲೂ ಈ ರೀತಿಯಾಗಿಯೇ ಇರಲಿ.[16] ಮಿಲೇತಿಯದಲ್ಲಿ ಉಂಟಾದ ದುಃಖದ ಬಿಳ್ಕೊಡುಗೆಯೇ ಇಲ್ಲಿಯೂ ಸಹ ಉಂಟಾಯಿತ್ತು:

> ಆ ದಿವಸಗಳನ್ನು ತೀರಿಸಿಕೊಂಡು ನಾವು ಹೊರಡುವಾಗ ಅವರೆಲ್ಲರೂ ಹೆಂಡರು ಮಕ್ಕಳು[17] ಸಹಿತವಾಗಿ ಬಂದು ನಮ್ಮನ್ನು ಊರ ಹೊರಕ್ಕೆ ಸಾಗಕಳುಹಿಸಿದರು.[18] ನಾವು ಸಮುದ್ರ ತೀರದಲ್ಲಿ ಮೊಣಕಾಲೂರಿಕೊಂಡು ಪ್ರಾರ್ಥನೆಮಾಡಿ[19] ಒಬ್ಬರಿಗೊಬ್ಬರು ವಂದನೆಮಾಡಿ ಹಡಗನ್ನು ಹತ್ತಿದೆವು; ಅವರು ಹಿಂತಿರುಗಿ ತಮ್ಮತಮ್ಮ ಮನೆಗಳಿಗೆ ಹೋದರು[20] (21:5, 6).

ಅವರನ್ನು ಸಾಗಕಳುಹಿಸಲೂ, ಅವರೆಲ್ಲರ ಕುಟುಂಬದವರೂ ಒಟ್ಟಾಗಿ ಸೇರಿ ಬಂದಿದ್ದರು. ಸ್ತ್ರೀ ಪುರುಷರು ಮಕ್ಕಳ ಸಹಿತವಾಗಿ ಕಣ್ಣೀರಿನಿಂದ ಅವರನ್ನು ಬೀಳ್ಕೊಟ್ಟರು, ಅವನು ಸಕಲ ಅಪಾಯವನ್ನು ಸ್ವೀಕರಿಸಲು ಸಿದ್ಧನಾಗಿದ್ದನು.

## ಕೃಪೆ ಉಳ್ಳವರಿಂದ ವಂದನೆ (21:7)

ಅವರು ತೂರ್ ಪಟ್ಟಣದಿಂದ, ದಕ್ಷಿಣ ಪ್ತೊಲೆಮಾಯಕ್ಕೆ ಸಮುದ್ರ ಪ್ರಯಾಣ ಮಾಡಿದರು. ಅದು ಫೂಯಿನೀಕೆಯ ದಕ್ಷಿಣದ ತುದಿಯ ರೇವು ಪಟ್ಟಣವೂ ಮತ್ತು ಕರ್ಮೆಲ ಬೆಟ್ಟದಿಂದ[21] ಹತ್ತು ಮೈಲಿಗಳ ಅಂತರದಲ್ಲಿತ್ತು. ಪ್ತೋಮಾಯವು ರೋಮಾಯರ ಆಡಳಿತಕ್ಕೆ ಒಳಪಟ್ಟಿತ್ತು,[22] ಹಳೆ ಒಡಂಬಡಿಕೆಯ ಕಾಲದಲ್ಲಿ ಅದನ್ನು "ಅಕ್ಕೋ"[23] ಎಂದು ಕರೆಯುತ್ತಿದ್ದರು (ನ್ಯಾಯಸ್ಥಾಪಕರು 1:31). ನಂತರ ಐಗುಪ್ತದ ಎರಡನೆಯ ಟಾಲೆಮಿಯು ಅದಕ್ಕೆ ಹೊಸ ಹೆಸರನ್ನು ನೀಡಿದನು. ತೂರ್ ಪಟ್ಟಣದಲ್ಲಿ ಸಭೆಯು ಸ್ಥಾಪನೆಗೊಂಡಂತ, ಸಮಯಕ್ಕೆ ಈ ತೂರ್ ಪಟ್ಟಣದಲ್ಲೂ ಒಂದು ಚಿಕ್ಕ ಸಭೆ ಸ್ಥಾಪನೆಗೊಂಡಿರಬಹುದು (11:19), ಅವರು ಈ ಪಟ್ಟಣದಲ್ಲಿ ಸೇರಿ ಬರುತ್ತಿದ್ದರು.

ಲೂಕನು ದಾಖಲಿಸಿರುವಂತೆ, "ಅವರು ತೂರ್ ಪಟ್ಟಣದಿಂದ ಹೊರಟು ಪ್ತೊಲೆಮಾಯಕ್ಕೆ ಸೇರಿ ಸಮುದ್ರ ಪ್ರಯಾಣವನ್ನು ಮುಗಿಸಿದರು.[24] ಅಲ್ಲಿದ್ದ ಸಹೋದರರನ್ನು ವಂದಿಸಿ, ಅವರ ಬಳಿಯಲ್ಲಿ ಒಂದು ದಿವಸ ಇದ್ದರು" (ವಚನ 7). ಪ್ತೋಲೆಮಾಯ[25] ಬಂದರಿನಲ್ಲಿ ಆ ಹಡಗು ನಿಲ್ಲುವಾಗ, ಆ ಸಹೋದರರು ಪೌಲನಿಗಾಗಿ ಕಾಯುತ್ತಿದ್ದರು ಎಂಬ ಭಾಷೆಯನ್ನು ಲೂಕನು ಬಳಸಿರುವನು - ಅವರು ಆ ಪ್ರಯಾಣಿಕರನ್ನು ತಮ್ಮಲ್ಲಿಗೆ ಕರಕೊಂಡು ಹೋದರು.

21:1-17ರಲ್ಲಿ, ಪೌಲನು ಕರ್ತನಿಗಾಗಿ ಸಕಲ ಅಪಾಯಗಳನ್ನು ಎದುರಿಸಲು ಸಿದ್ಧನಿರುವ ಮುಖ್ಯ ಸಾರಾಂಶವನ್ನು ನೋಡುವುದಾದರೆ, ಆದಿ ಸಭೆಯ ಸಹೋದರರು ಒಟ್ಟಾಗಿ ಸೇರಿ ಬರುವ ಆಶೆಯು ಎರಡನೆಯ ಸಾರಾಂಶವಾಗಿದೆ. ಅಧ್ಯಾಯ 20 ಮತ್ತು 21ನ್ನು ನಾನು ಓದು ವಾಗ, ಪ್ರತಿಪಟ್ಟಣದಲ್ಲಿ ಪೌಲನು ಸಹೋದರರಿಗಾಗಿ ಹುಡುಕಾಟ ಮಾಡಿದ ಪ್ರಯತ್ನವನ್ನು ನಾನು ಮೆಚ್ಚುವವನಾಗಿದ್ದೇನೆ. ಅವರುಗಳು ನೀಡಿದ ಅತಿಥಿ ಸತ್ಕಾರವನ್ನು ನಾನು ಮೆಚ್ಚು ತ್ತೇನೆ.[26] ಇದಕ್ಕಿದ್ದ ಹಾಗೆ 9 ರಿಂದ 10 ಜನರು ಒಬ್ಬರ ಮೇಲೆ ಬರುವಾಗ, ಅದನ್ನು ಭಾರ ಎಂಬುದಾಗಿ ಅವರುಗಳು ಪರಿಗಣಿಸಲಿಲ್ಲ. ಪ್ತೊಲೆ ಮಾಯದ ಕ್ರೈಸ್ತರು, "ನಾವು ಕರ್ತನನ್ನು

ನಂಬಿದವರೆಂದು ನಿಶ್ಚಯಿಸಿಕೊಂಡಿದ್ದರೆ, ನಮ್ಮ ಮನೆಯಲ್ಲಿ ಬಂದು ಇರ್ರಿ" ಎಂದು ಹೇಳಿರ ಬಹುದು (ನೋಡಿರಿ 16:15).[27]

ತೂರ್ ಮತ್ತು ಪ್ಟೊಲೆಮಿಯದವರ ಕೃಪಾ ಪೂರ್ವಕವಾದ ಅತಿಥಿ ಸತ್ಕಾರವನ್ನು ನಾನು ಶ್ಲಾಘಿಸುತ್ತೇನೆ. ಯಾಕಂದರೆ ಆ ಸಭೆಗಳವರು ಪೌಲನಿಂದ ಉಂಟಾದ ಹಿಂಸೆಯ ಪರಿಣಾಮ ವಾಗಿ ಸ್ಥಾಪನೆಗೊಂಡ ಸಭೆಗಳಾಗಿದ್ದವು (8:1-4; 11:19). ಅವರಿಗೆ, ಈ ಹಿಂದೆ ಹಿಂಸೆ ನೀಡಿದ್ದ ವ್ಯಕ್ತಿಯು, ಅವರ ಮನೆಬಾಗಿಲಿನ ಬಳಿಗೆ ಬಂದಾಗ, ಅವನು ಅವರಿಗೆ ನೀಡಿದ್ದ ಹಿಂದಿನ ಹಿಂಸೆಯನ್ನು ನೆನಪು ಮಾಡದೆ, ಪೌಲನನ್ನು ಮತ್ತು ಅವನ ಸಂಗಡಿಗರನ್ನು ಸತ್ಕರಿಸಿದರು.

ಇತರರೊಂದಿಗೆ ಬೆರೆಯುವಂಥದ್ದು, ಕ್ರೈಸ್ತರ ಒಂದು ಆಶೀರ್ವಾದವಾಗಿರುತ್ತದೆ. ಕ್ರೈಸ್ತ ರಾದವರು "ಸಹೋದರರರನ್ನು ಹುಡುಕಿ ಕಂಡುಕೊಳ್ಳದಿದ್ದರೆ" ಅವರು ತಮ್ಮ ಪ್ರಯಾಣದಲ್ಲಿ ಅನೇಕ ಆಶೀರ್ವಾದಗಳನ್ನು ಕಳಕೊಳ್ಳುವರು!

ನಮ್ಮ ಪಾಠದಲ್ಲಿರುವ ಮೊದಲ ಹಾಗೂ ಎರಡನೆಯ ವಿಷಯವು ಪರಸ್ಪರ ವಿಶೇಷವಾ ಗಿರುವದಿಲ್ಲ. ಪೌಲನು ತನ್ನ ಪ್ರಿಯ ಸಹೋದರರಿಗಾಗಿ, ಸಕಲ ಅಪಾಯಕ್ಕೂ ಗುರಿಯಾಗಲು ಸನ್ನದ್ಧನಾಗಿದ್ದನು. ಪೌಲನು ಯೆಹೂದ್ಯರ ಮತ್ತು ಅನ್ಯರ ನಡುವಿನ ಸಂಬಂಧವನ್ನು ಸುಲಭಮಾಡುವ ನಿರೀಕ್ಷೆಯಿಂದ ಯೆರೂಸಲೇಮಿಗೆ ಹೋಗುತ್ತಿದ್ದನು (ರೋಮಾಪುರ 15:22-33) ಯೇಸುವಿನ ಹಾಗೆ, "ಸ್ನೇಹಿತರಿಗಾಗಿ ತನ್ನ ಪ್ರಾಣವನ್ನು ಅರ್ಪಿಸಲು ಚಿತ್ತೈಸಿದ್ದನು" (ಯೋಹಾನ 15:13ಬಿ).

## ಕೈಸರೈಯದಲ್ಲಿ ದುಃಖಕ್ರಾಂತನಾದನು (21:8-14)

ಪ್ಟೊಲೊಮಿಯದಲ್ಲಿ ಒಂದು ದಿವಸವನ್ನು ಕಳೆದ ನಂತರ, ಪೌಲ ಮತ್ತು ಅವನ ಸಂಗಡಿಗರು ದಕ್ಷಿಣದ ಕೈಸರೈಯಕ್ಕೆ ಬಂದರು (ವಚನ 8ಎ),[28] ಅದು ಪಾಲೇಸ್ತೇನಿನ ಪ್ರಧಾನ ರೇವು ಪಟ್ಟಣವಾಗಿತ್ತು,[29] ಅಲ್ಲಿಯ ಅನ್ಯರಿಗೆ ಪೇತ್ರನು ಮೊದಲ ಬಾರಿಗೆ ಸುವಾರ್ತೆಯನ್ನು ಸಾರಿದ್ದನು (ಅಧ್ಯಾಯ 10 ಮತ್ತು 11).[30] ನಂತರದಲ್ಲಿ ಪೌಲನು ಅಲ್ಲಿ ಎರಡು ವರ್ಷಗಳ ಕಾಲ ಸೆರೆಮನೆಯಲ್ಲಿದ್ದಿದ್ದರಿಂದ, ಅದು ಇನ್ನೂ ಹೆಚ್ಚಿನ ಪ್ರಖ್ಯಾತಿಗೆ ಬಂತು (23:31-35; 24:27). ನಮ್ಮ ಈ ಪಾಠದ ಕಥೆಯಲ್ಲಿ, ಹೇಗೂ, ಪೌಲನು ಯೆರೂಸಲೇಮಿಗೆ ಹೋಗುವ ಮೊದಲು, ಇಳುಕೊಂಡ ಕಡೇಯ ಸ್ಥಳವು ಕೈಸರೈಯಾಗಿತ್ತು.

ಕೈಸರೈಯು ಯೆರುಸಲೇಮಿನಿಂದ ಅರವತ್ತು ಮೈಲುಗಳ ಅಂತರದಲ್ಲಿತ್ತು, ಎರಡು ದಿನಗಳ ಪ್ರಯಾಣವಾಗಿತ್ತು. ಪೌಲನು ಆ ಪಟ್ಟಣದಲ್ಲಿ ಅನೇಕ ದಿವಸಗಳ ಕಾಲ ತಂಗಿದ್ದನು (21:10),[31] ಯೆರೂಸಲೇಮಿನ ಪಂಚಾಶತ್ತಮ ದಿನದವರೆಗೂ ಅಲ್ಲಿ ತಂಗಿದ್ದನು. ಅವನು ಒಬ್ಬ ಪ್ರಖ್ಯಾತಿಗೊಂಡ ಮನುಷ್ಯನಲ್ಲಿ ಅತಿಥಿಯಾಗಿದ್ದನು ಎಂದು ಲೂಕನು ತಿಳಿಸಿ, "ನಾವು ಕೈಸರೈಯಕ್ಕೆ ಬಂದು ಸೌವಾರ್ತಿಕನಾದ ಫಿಲಿಪ್ಪನ ಮನೆಗೆ ಹೋಗಿ, ಅವನ ಬಳಿಯಲ್ಲಿಯೇ ಇಳುಕೊಂಡೆವು[32] ಅವನು ಏಳ್ವರಲ್ಲಿ ಒಬ್ಬನು" (ವಚನ 8ಬಿ).

ಅಧ್ಯಾಯ 6ರಲ್ಲಿ, ನಾವು "ಸೌವರ್ತಿಕನಾದ ಫಿಲಿಪ್ಪನನ್ನು" ಮೊದಲಿಗೆ ಸಂಧಿಸಿದೆವು, ಉಪಚಾರ ಮಾಡುವದಕ್ಕಾಗಿ ಆಯ್ಕೆಗೊಂಡ ಏಳು ಜನರಲ್ಲಿ, ಇವನೂ ಸಹ ಒಬ್ಬನಾಗಿದ್ದನು (6:1-6). ಕ್ರೈಸ್ತರು ಯೆರೂಸಲೇಮಿನಿಂದ ಚದರಿದಾಗ, ಇವನು ಉತ್ತರದ ಸಮಾರ್ಯಕ್ಕೆ ಹೋಗಿ ಸುವಾರ್ತೆಯನ್ನು ಸಾರಿದನು (8:4-13). ನಂತರ, ದಕ್ಷಿಣಕ್ಕೆ ಪ್ರಯಾಣ ಮಾಡಿ ಐಥಿಯೋಫಿಯದ ಕಂಚುಕಿಗೆ ಸುವಾರ್ತೆ ಸಾರಿದನು (8:26-39). ನಂತರ ಪಾಲೇಸ್ತೇನಿನ ಉತ್ತರದ ಕರಾವಳಿಯಲ್ಲಿ ಸಂಚರಿಸಿ, "ಎಲ್ಲಾ ಊರುಗಳಲ್ಲಿ ಸುವಾರ್ತೆಯನ್ನು ಸಾರುತ್ತಾ ಹೋದನು" (8:40ಬಿ). ಕೈಸರೈಯಲ್ಲಿ ಮನೆಯನ್ನು ಮಾಡಿ, ತನ್ನ ಕೌಟುಂಬಿಕ ಜೀವನವನ್ನು ಆರಂಭ ಮಾಡಿದ್ದನು.[33]

ಫಿಲಿಪ್ಪನನ್ನು, "ಸೌವಾರ್ತಿಕನು"[34] ಎಂದು ಕರೆದರು, ಯಾಕೆಂದರೆ ಅವನು

ಆತ್ಮೀಕವಾಗಿ ಆ ಸೇವೆಯನ್ನು ಅನುಸರಿಸಿದ್ದನು. ಹೊಸ ಒಡಂಬಡಿಕೆಯಲ್ಲಿ ಮೂರು ಸಾರಿ "ಸೌವಾರ್ತಿಕನು" ಎಂಬ ಪದವನ್ನು ಬಳಸಿರುವಲ್ಲಿ, ಇಲ್ಲಿ ಒಂದು ಸಾರಿ ಆ ಪದವನ್ನು ಉಲ್ಲೇಖಿಸಲಾಗಿದೆ (ಇದನ್ನು ನೋಡಿರಿ ಎಫೆಸ 4:11; 2 ತಿಮೊಥೆ 4:5). "ಸೌವಾರ್ತಿಕನು" ಎಂಬ ಪದವನ್ನು ಗ್ರೀಕ್‌ನಲ್ಲಿ "ಸುವಾರ್ತೆ" ಎಂದು ವ್ಯಾಖ್ಯಾನಿಸಿರುವರು. ಅದರ ಮೂಲ ಅರ್ಥ "ಸುವಾರ್ತಾ ಪ್ರಚಾರಕನು" ಇನ್ನೊಂದು ಪದದಲ್ಲಿ, "ಶುಭ ಸಮಾಚಾರವನ್ನು ಪ್ರಚಾರ ಮಾಡುವವನು"[35] ಅಪೊಸ್ತಲರ ಕೃತ್ಯಗಳು 8:40ರಲ್ಲಿ, ಅದರ ನಾಮ ಪದವನ್ನು ಬಳಸಲಾಗಿದೆ, ಅಲ್ಲಿ ಫಿಲಿಪ್ಪನು, "ಎಲ್ಲಾ ಊರುಗಳಲ್ಲಿ *ಸುವಾರ್ತೆಯನ್ನು ಸಾರುತ್ತಾ* ಹೋದನು" ಎಂಬುದಾಗಿದೆ.

ಫಿಲಿಪ್ಪನು ಸ್ತೆಫನನ ಜೊತೆ ಕೆಲಸದವನಾಗಿದ್ದರಿಂದ, ಪೌಲನ ಮೇಲೆಭರವಸವಿಡದೆ ಅವನನ್ನು ಅತಿಯಾಗಿ ದ್ವೇಷಿಸಲು ಸಾಧ್ಯವಾಗಿದ್ದರೂ, ಪೌಲನು ಫಿಲಿಪ್ಪನ ಮನೆಯಲ್ಲಿ ಅತಿಥಿಯಾಗಿದ್ದನು (6:5). ಸ್ತೆಫನ ಮರಣಕ್ಕೆ ಪೌಲನೇ ಕಾರಣ ವಾಗಿದ್ದನು ಆ ಸಮಯದಲ್ಲಿ ಫಿಲಿಪ್ಪನು, ಯೆರೂಸಲೇಮಿನಲ್ಲಿ ಪೌಲನಿಂದ ತಪ್ಪಿಸಿಕೊಂಡು ಹೋಗಿದ್ದನು (8:1-5). ಆದಾಗ್ಯೂ, ಪುನಃ ನಾವು ಇಲ್ಲಿ ಕೃಪಾಪೂರ್ಣವಾದ ಕ್ರೈಸ್ತರ ಅನ್ಯೋನ್ಯತೆಯನ್ನು ಗಮನಿಸುತ್ತೇವೆ, ಫಿಲಿಪ್ಪನು ಪೌಲನನ್ನು ಹಾಗೂ ಅವನ ಸಂಗಡಿಗರನ್ನು ತನ್ನ ಮನೆಗೆ ಅತಿಥಿಗಳನ್ನಾಗಿ ಸ್ವೀಕರಿಸುವದರಲ್ಲಿ ಕೃಪೆಯನ್ನು ಕಾಣುತ್ತೇವೆ.

ವಚನ 9ರಲ್ಲಿ, ಲೂಕನು ಆಸಕ್ತಿಕರವಾದ ಫಿಲಿಪ್ಪನ ಚರಿತ್ರೆಯನ್ನು ಸೇರಿಸಿರುವನು: "ಅವನಿಗೆ ಮದುವೆಯಾಗದ[36] ನಾಲ್ಕು ಮಂದಿ ಹೆಣ್ಣು ಮಕ್ಕಳಿದ್ದರು; ಅವರು ಪ್ರವಾದಿಸುವವರಾಗಿದ್ದರು. ಪಂಚಾಶತ್ತಮ ದಿನದಂದು, ಪೇತ್ರನು ಯೋವೇಲ 2ರಿಂದ ದೇವರ ವಾಗ್ದಾನವನ್ನು ಉಲ್ಲೆಖಿಸಿ, "... ನಾನು ಎಲ್ಲಾ ಮನುಷ್ಯರ ಮೇಲೆ ನನ್ನ ಆತ್ಮವನ್ನು ಸುರಿಸುವೆನು ನಿಮ್ಮಲ್ಲಿರುವ ಗಂಡಸರೂ ಹೆಂಗಸರೂ ಪ್ರವಾದಿಸುವರು" (ಅಪೊಸ್ತಲರ ಕೃತ್ಯಗಳು 2:17). ಪ್ರವಾದನೆ ಅಂದರೆ, "ದೇವ ಪ್ರೇರಿತರಾಗಿ ಮಾತನಾಡುವದು"[37] ಪ್ರವಾದನ ವರವನ್ನು ಗಂಡಸರಿಗೂ ಹೆಂಗಸರಿಗೂ ನೀಡಲಾಯಿತು (1 ಕೊರಿಂಥ 11:4, 5) ಅಪೊಸ್ತಲರು ಹಸ್ತವನ್ನು ಇಡುವದರ ಮೂಲಕ ಅದು ದೊರೆಯಿತು. ಸ್ತ್ರೀಯರು ಈ ಕೃಪಾವರವನ್ನು ಬಹಿರಂಗ ಸಭೆಯ ಆರಾಧನೆಯಲ್ಲಿ ಉಪಯೋಗಿಸ ತಕ್ಕದಲ್ಲ (1 ಕೊರಿಂಥ 14:23, 31-37) (ಅವರು ಪ್ರಸಂಗಿಸಬಾರದು),[38] ಆ ಕೃಪಾವರವನ್ನು ಖಾಸಗಿಯಾಗಿ ಉಪಯೋಗಿಸಬಹುದು.

ಫಿಲಿಪ್ಪನ ಹೆಣ್ಣು ಮಕ್ಕಳ ಈ ವಿವರಣೆಯನ್ನು ಲೂಕನು ಏಕೆ ನೀಡಿದನು?[39] ಈ ನಾಲ್ಕು ಪ್ರವಾದಿಗಳು, ಪೌಲನಿಗೆ ಯೆರೂಸಲೇಮಿನಲ್ಲಿ ಬರಬಹುದಾದ ಹಿಂಸೆಯ ಕುರಿತು ದೃಢಿಕರಿಸಿದರು ಎಂಬದು ಕೆಲವರ ಅಭಿಪ್ರಾಯ. ಇನ್ನೊಂದು ಹೇಳಿಕೆಯಂತೆ, ಆದಿ ಕ್ರೈಸ್ತರ ಬರವಣಿಗೆಯ ಪ್ರಕಾರ, ಆದಿಸಭೆಯ ಚರಿತ್ರೆಯ ಮಾಹಿತಿಯನ್ನು ಈ ಪ್ರವಾದಿಗಳಿಂದ ಉಂಟಾಯಿತು ಮತ್ತು ಸಭೆಗೆ ಇವರು ಲಾಭದಾಯಕವಾಗಿದ್ದರು ಎಂಬ ಪ್ರತೀತಿ ಉಂಟು. ಲೂಕನು ಸಭೆ ಮತ್ತು ಕ್ರಿಸ್ತನ ಕೆಲಸದ ಬರವಣಿಗೆಗಳಿಗೆ, ಇವರೇ ಮೂಲವಾಗಿದ್ದರು ಎಂಬ ಅಭಿಪ್ರಾಯವೂ ಸಹ ಇರುತ್ತದೆ (ನೋಡಿರಿ ಲೂಕ 1:3).[40]

ಪೌಲನು ಫಿಲಿಪ್ಪನ ಮನೆಯಲ್ಲಿ ತಂಗಿರುವಾಗ, ಅವನಿಗೆ ಮುಂದೆ ಸಂಭವಿಸಲಿದ್ದ ವಿಚಾರವು ಸಮಾಧಾನದ ಪರಿಸರವನ್ನು ಅಸಮಧಾನಗೊಳಿಸಿತು. ಈ ಪ್ರಕಟಣೆಯು ಬಹು ಗುರುತರವಾಗಿತ್ತು. "ನಾವು ಅಲ್ಲಿ ಅನೇಕ ದಿವಸಗಳು ಇದ್ದ ಮೇಲೆ ಅಗಬನೆಂಬ ಒಬ್ಬ ಪ್ರವಾದಿಯು ಯುದಾಯದಿಂದ ನಮ್ಮ ಬಳಿಗೆ ಬಂದನು" (ಅಪೊಸ್ತಲರ ಕೃತ್ಯಗಳು 21:10). "ಅಗಬ್ಬನು" ಎಂಬದು ಸಾಮಾನ್ಯವಾದ ಹೆಸರಾಗಿರಲಿಲ್ಲ, "ಲೋಕಕ್ಕೆಲ್ಲಾ ದೊಡ್ಡ ಕ್ಷಾಮ ಬರುವದು" (11:28ಬಿ) ಎಂದು ಈ ಹಿಂದೆ ಹೇಳಿದ್ದ ಯೆರೂಸಲೇಮಿನ ಪ್ರವಾದಿಯು ಇವನೇ ಇರಬಹುದು. ಈಗ ಅವನು ಸಾಮಾನ್ಯವಾದ ಆಪತ್ತಿನ ಪ್ರವಾದನೆಯನ್ನು ಹೇಳದೆ, ವೈಯಕ್ತಿಕ ಆಪತ್ತಿನ ಪ್ರವಾದನೆಯನ್ನು ನುಡಿದನು - ಅದನ್ನು ಪೌಲನಿಗಾಗಿ ಹೇಳಿದನು. ಹಳೆ

ಒಡಂಬಡಿಕೆಯ ಪ್ರವಾದಿಗಳಂತೆ, ಪ್ರವಾದನೆಯ ಸಂಗಡ ಸಂಕೇತಗಳನ್ನು ಪ್ರಾಯೋಜನೆ ಮಾಡಿದನು.[41]

> ಪೌಲನ ನಡುಕಟ್ಟನ್ನು ತೆಗೆದು ತನ್ನ ಕೈ ಕಾಲುಗಳನ್ನು ಕಟ್ಟಿಕೊಂಡು[42] - ಈ ನಡುಕಟ್ಟು ಯಾವನದೋ ಆ ಮನುಷ್ಯನನ್ನು ಯೆಹೂದ್ಯರು ಇದೇ ರೀತಿಯಾಗಿ ಯೆರೂಸಲೇಮಿನಲ್ಲಿ ಕಟ್ಟಿ ಅನ್ಯಜನರ ಕೈಗೆ ಒಪ್ಪಿಸಿ ಕೊಡುವರು, ಹೀಗೆ ಪವಿತ್ರಾತ್ಮನು ಹೇಳುತ್ತಾನೆಂಬದಾಗಿ ಹೇಳಿದನು (21:11).

ಮುಂದಿನ ಪಾಠದಲ್ಲಿ, ಈ ಮೇಲಿನ ಪ್ರವಾದನೆಯ ನೆರವೇರಿಕೆಯನ್ನು ಗಮನಿಸುತ್ತೇವೆ. ಅನ್ಯರ ಕೈಗೆ ಒಪ್ಪಿಸುವ ಸಲುವಾಗ ಯೆಹೂದ್ಯರು ಪೌಲನನ್ನು *ಕಟ್ಟಿಹಾಕಲಿಲ್ಲ.* ಅವರೇ ಅವನಿಗೆ ಮರಣವನ್ನು ವಿಧಿಸಬೇಕೆಂಬ ಉದ್ದೇಶದಿಂದ ಇದನ್ನು ಮಾಡಿದ್ದರು, ಆದರೆ ಅನ್ಯರೇ (ರೋಮಾ ಸಿಪಾಯಿಗಳು) ಅವನನ್ನು ಜನರ ದೊಂಬಿಯಿಂದ ತಪ್ಪಿಸಿದರು. ಅದ್ದರಿಂದ ಮುಂತಿಳಿಸಿದ ಪ್ರವಾದನೆಯ ಅರ್ಥವೇ ನೆಂದರೆ, ಅನ್ಯರಿಗೆ ಒಪ್ಪಿಸಲು, ಪೌಲನನ್ನು *ಕಟ್ಟಿದರು* ಎಂಬದೇ ಇದರಲ್ಲಿ ಈ ಅರ್ಥವಿರುವದಾದರೆ ಲೂಕನು ಏಕೇ ಈ ವ್ಯಾಖ್ಯಾನವನ್ನು ಬಳಸಿದನು? ಪ್ರಾಯಶಃ ಯೆರೂಸಲೇಮಿನಲ್ಲಿ ಉಂಟಾದ ಘಟನೆಯಂತೆ, ಯೇಸುವಿಗೂ ಹಾಗೂ ಪೌಲನಿಗೆ ನಡುವೆ ಇರುವ ಸಮಾನವಾದ ಸಂಗತಿಗಳ ಹೊಂದಾಣಿಕೆಯನ್ನು ತಿಳಿಸಿರಬಹುದು (ಲೂಕ 18:32).

ಅಗಬನು ಬರುವದಕ್ಕಿಂತ ಮುಂಚೆಯೇ, ಪೌಲ ಮತ್ತು ಅವನ ಸಂಗಡಿಗರು, ಅವರಿಗೆ ಈ ಹಿಂದೆ ಕೆಲವರು, "ಅವರು ಯೆರೂಸಲೇಮಿಗೆ ಹೋಗಬಾರದೆಂದು ತಡೆಗಟ್ಟಿದ್ದಾಗ್ಯೂ ಅದಕ್ಕೆ ಅವರು ಮನ್ನಣೆ ನೀಡಲಿಲ್ಲ." ಹೇಗೂ, ಅವರು ಯೆರೂಸಲೇಮಿಗೆ ಹೋಗುವ ಸಮಯವು ಸಮೀಪಿಸುವಾಗ, ಭಯಗೊಂಡಿರಬಹುದು. ಈಗ ಯೆರೂಸಲೇಮ ಕೇವಲ ಅರವತ್ತು ಮೈಲುಗಳ ಅಂತರದಲ್ಲಿತ್ತು, ಮತ್ತು ಅಗಬನ ಪ್ರಕಟನೆಯು ಅವರನ್ನು ಸಂದಿಗ್ಧ ಪರಿಸ್ಥಿತಿಗೆ ಸಿಲುಕಿಸಿತ್ತು. ಈಗ ಲೂಕ ಮತ್ತು ಇತರರು, ಅವನನ್ನು ಯೆರೂಸಲೇಮಿಗೆ ಹೋಗಲೇ ಬಾರದೆಂದು ತಡೆಗಟ್ಟಿದರು, "ಆ ಮಾತನ್ನು ಕೇಳಿದಾಗ ನಾವೂ - ಆ ಸ್ಥಳದವರೂ - ನೀನು ಯೆರೂಸಲೇಮಿಗೆ ಹೋಗಬಾರದೆಂದು ಪೌಲನನ್ನು ಬೇಡಿಕೊಂಡೆವು" (ಅಪೊಸ್ತಲರ ಕೃತ್ಯಗಳು 21:12). "ಇನ್ನು ಎರಡು ದಿವಸಗಳಲ್ಲಿ ಯೆರೂಸಲೇಮಿನಲ್ಲಿ ಇರುತ್ತೇವೆ, ನಿನ್ನ ಯೆರೂಸಲೇಮಿನ ದಾನಗಳನ್ನು ನಾವೇ ತೆಗೆದುಕೊಂಡು ಹೋಗುತ್ತೇವೆ, ನೀನು ಅಪಾಯಕ್ಕೆ ಸಿಲುಕಿಕೊಳ್ಳಬಾರದು" ಎಂದು ವಾದವನ್ನು ಅವರು ಮಾಡಿರಬಹುದೆಂಬ ಊಹೆಯನ್ನು ನಾನು ಮಾಡುತ್ತೇನೆ. ಆ ಪ್ರಕಟನೆಯನ್ನು ಅವರು ಗಂಭೀರವಾಗಿ ಆಲಿಸಿದ್ದರು. "ಒಂದು ವೇಳೆ ಪೌಲನು ಅಲ್ಲಿಗೆ *ಹೋದರೆ,* ಈ ಸಂಗತಿ ಸಂಭವಿಸುತ್ತದೆ" ಎಂದು ಪರಿಶುದ್ಧಾತ್ಮನು ತಿಳಿಸಿರಲಿಲ್ಲ. ಅವರು ಪೌಲನಿಗೆ ಹೋಗಬಾರದೆಂದು ಮಾಡಿದ ಮನವಿಯು, ದೇವರನ್ನು ಸುಳ್ಳುಗಾರನನ್ನಾಗಿ ಮಾಡಿಸಿತು.

ಪೌಲನು ತನ್ನನ್ನು ಪ್ರೀತಿಸಿದ ಸಹೋದರರ ನಡುವೆ ಇದ್ದನು, ಅವರೆಲ್ಲರೂ ಒಕ್ಕೂರಲಿನಿಂದ ಅವನು ಹೋಗಬಾರದೆಂದು ಬೇಡಿಕೊಳ್ಳುತ್ತಿದ್ದರು. ಅವನ ಪ್ರಿಯ ಸಹೋದರನಾದ ಲೂಕನು ಕಣ್ಣೀರಿನಿಂದ ಅವನನ್ನು ಬೇಡಿಕೊಳ್ಳುತ್ತಿದ್ದನು, ತಿಮೊಥಿಯು ಅವನನ್ನು ಮಂಜಾದ ಕಣ್ಣಿನಿಂದ ನೋಡುತ್ತಿದ್ದನು, ಅಲ್ಲಿ ಅವನ ಸ್ವರವಿರಲಿಲ್ಲ. ಅಪೊಸ್ತಲನು ಅದನ್ನು ಸಹಿಸಲಾರದವನಾದನು. ಆಗ ಪೌಲನು ಗಟ್ಟಿಯಾಗಿ: "ನೀವು ಅತ್ತತ್ತು ಯಾಕೆ ನನ್ನನ್ನು ಎದೆ ಬಡಿಸುತ್ತಿರಿ? ನಾನು ಕರ್ತನಾದ ಯೇಸುವಿನ ನಿಮಿತ್ತವಾಗಿ ಯೆರೂಸಲೇಮಿನಲ್ಲಿ[43] ಬೇಡಿ ಹಾಕಿಸಿಕೊಳ್ಳುವದಕ್ಕೆ ಮಾತ್ರವಲ್ಲದೆ ಸಾಯುವದಕ್ಕೂ ಸಿದ್ಧನಾಗಿದ್ದೇನೆ ಅಂದನು" (ವಚನ 13). ಗ್ರೀಕ್ ಭಾಷೆಯಲ್ಲಿ ಎದೆ ಬಡಿ ಅಂದರೆ "ಪುಡಿಯಾಗಿ ಮಾಡಲ್ಪಡುವದು" ಅವರು ನಿಲ್ಲಿಸದೆ ಹೋದರೆ, ಅವನ ಉದ್ದೇಶವನ್ನು ಅವರು ನಾಶಮಾಡುವ ಸಾಧ್ಯತೆಯಿತ್ತು.

ಪೌಲನು ತನ್ನ ದೇವರಿಗೆ ಮಾಡಿಕೊಂಡಿದ್ದ ಪ್ರತಿಷ್ಟೆಯಿಂದ, ಹಿಂದೆ ಸರಿಯುವ ಮಹತ್ತರವಾದ ಒತ್ತಾಯವು ಇದಾಗಿತ್ತು - ಯಾಕೆಂದರೆ ಅವನ ಸ್ನೇಹಿತರಿಂದಲೇ ಈ ಒತ್ತಾಯವು ಉಂಟಾಗಿತ್ತು. ಅವರುಗಳು ಅದನ್ನು ಕೆಟ್ಟ ಮನೋಭಾವದಿಂದ ಮಾಡಿರಲಿಲ್ಲ; ಆದರೆ ಅವರು ಅವನ ಮೇಲೆ ಇಟ್ಟಿದ್ದ ವಿಶ್ವಾಸದ ನಿಮಿತ್ತ ಇದನ್ನು ಮಾಡಿದ್ದರು. ಆದಾಗ್ಯೂ, ಪೌಲನು ದೇವರ ಉದ್ದೇಶ ಹಾಗೂ ಯೋಜನೆಗಳಲ್ಲಿ ವಿಶ್ವಾಸವಿಟ್ಟಿದ್ದನು.

ನೀವು ಕರ್ತನಿಗಾಗಿ ಅಪಾಯಕ್ಕೆ ಒಳಗಾಗುವಾಗ, (ನಿಮ್ಮಲ್ಲಿ ಕೆಲವರಿಗೆ ಈ ಕಾರ್ಯವಾಗಿದೆ) ನಿಮ್ಮ ಹತ್ತಿರದ ಸ್ನೇಹಿತರು, ನಿಮಗೆ, "ನೀನು ಮೂರ್ಖನಾಗಿದ್ದೀ, ಆದ್ದರಿಂದ ನಿನ್ನ ಪ್ರತಿಷ್ಟೆಯನ್ನು ನಿರಾಕರಿಸು" ಎಂದು ಹೇಳುವದರಲ್ಲಿ ಆಶ್ಚರ್ಯವ್ಯಕ್ತವಾಗುವದಿಲ್ಲವೇ. ಲೂಕನು ಮತ್ತು ತಿಮೊಥಿಯು ಪೌಲನಿಗೆ ಸಮೀಪರಾದ ಸ್ನೇಹಿತರಂತೆ, ನಿಮ್ಮ ಸ್ನೇಹಿತರುಗಳೂ ಇರಬಹುದು. ಸ್ನೇಹಿತರ ಈ ಅರ್ಥಗರ್ಭಿತವಾದ ಸಲಹೆಗಳಿಗೆ ಒಳಗಾಗಿ ತಮ್ಮ ಸೇವೆಯನ್ನು ನಿರಾಕರಿಸಿದ ಕೆಲವು ಯೌವ್ವನ ಪ್ರಸಂಗಿಗಳ ಪರಿಚಯವು ನನಗಿದೆ. ಅನೇಕ ಯೌವನಸ್ಥ ಯೌವನಸ್ಥೆಯರು ತಮ್ಮ ದಾಂಪತ್ಯ ಜೀವನವನ್ನು ಸುಗಮ ಮಾಡಿಕೊಳ್ಳಬೇಕೆಂದು ಯತ್ನಿಸುವಾಗ, ಅವರ ಸ್ನೇಹಿತರುಗಳು "ಅದನ್ನು ಮಾಡುವ ಅಗತ್ಯವಿಲ್ಲವೆಂಬ ಸಲಹೆಯನ್ನು ನೀಡಿರುವರು." ಇತರೆ ದೇಶಗಳಿಗೆ ಹೋಗಿ ಪ್ರಸಂಗಿಸಿ ಉಪದೇಶಮಾಡಲು ಇಚ್ಚಿಸಿದವರು, ತಮ್ಮ ಸ್ನೇಹಿತರ ಮಾತುಗಳನ್ನು ಕೇಳಿ, ಅದನ್ನು ಮಾಡದೆ ಇರುವದನ್ನು ನಾನು ಅರಿತಿರುವೆನು. ಇಲ್ಲಿರುವ ಅನೇಕ ಸ್ನೇಹಿತರು ಕೆಟ್ಟ ಮನೋಭಾವದ ಪ್ರಕಾರ ನಡೆದುಕೊಳ್ಳದೆ ಅವರನ್ನು ಪ್ರೀತಿಸಿದ ನಿಮಿತ್ತ ಇಂತಹ ಸಲಹೆಗಳನ್ನು ನೀಡಿದರು. ಕ್ರೈಸ್ತರಿಗೆ ವೈಯಕ್ತಿಕವಾದ ಇಚ್ಚೆಗಳಿಂಗಿಂತ ಅವರು ದೇವರಿಗೆ ಮಾಡಿರುವ ಪ್ರತಿಷ್ಟೆಗಳೇ ಅಮೂಲ್ಯವಾದದ್ದು ಎಂದು ಅವರುಗಳು ಅರಿಯಲಿಲ್ಲ. ನೀವು ದೇವರಿಗೆ ಪ್ರತಿಷ್ಟೆ ಪಡಿಸಿಕೊಳ್ಳುವಾಗ, ಉಂಟಾಗುವ ಪರಿಣಾಮಗಳನ್ನು ಎದುರಿಸುವಂತೆ, ನಿಮ್ಮ ಜವಿತಗಳನ್ನು ದೇವರ ಕೈಗಳಿಗೆ ಸಮರ್ಪಿಸಿರಿ, ನಿಮ್ಮ ಸ್ನೇಹಿತರುಗಳು ನಿಮ್ಮ ಪ್ರತಿಷ್ಟೆಗೆ ಅಡ್ಡಿಯಾಗದಿರಲಿ.[44]

ಕರ್ತನಿಗಾಗಿ, ನೀವು ಅಪಾಯಗಳಿಗೆ ಒಳಗಾಗುವಾಗ, ನಿಮ್ಮ ಸ್ನೆಹಿತರುಗಳು ನಿಮಗೆ ಅಡ್ಡಿಪಡಿಸಲು ಸಾಧ್ಯವಿಲ್ಲ. ಮುಂದಿನ ವಾಕ್ಯಭಾಗವು ಈ ಕುರಿತು ನಿಮಗೆ ಉತ್ತರವನ್ನು ನೀಡುತ್ತದೆ ಎಂದು ನಂಬುತ್ತೇನೆ. "ಅವನು ಒಡಂಬಡದೆ ಇರವಾಗ ಕರ್ತನ ಚಿತ್ತವಿದ್ದಂತೆ ಆಗಲಿ ಎಂದು ಹೇಳಿ ನಾವು ಸುಮ್ಮಗಾದೆವು!"[45] (ವಚನ 14).

ಈ ದಿನಗಳಲ್ಲಿ, ಆತನ ಮಕ್ಕಳಿಗೆ ಹಸಿವೆಯಾಗಲೀ ಅಥವಾ ಅನಾರೋಗ್ಯವಾಗಲೀ, ಅಥವಾ ಸಂಕಟಗಳಾಲೀ ಇರುವದಿಲ್ಲ ಎಂದು ಕೆಲವರು ಉಪದೇಶ ಮಾಡುವರು ಸಂಕಟಗಳು ಎದುರಾಗುವದಿದ್ದರೂ, ಪೌಲನು ಯೆರೂಸಲೇಮಿಗೆ ಹೋಗುವದು ದೇವರ ಚಿತ್ತವಾಗಿತ್ತು. ಕೆಲವು ಸಾರಿ ದೇವರ ಮಹೋನ್ನತ ಉದ್ದೇಶಗಳಿಗಾಗಿ, ವೈಯಕ್ತಿಕವಾದ ಇಚ್ಚೆಗಳನ್ನು ತ್ಯಾಗ ಮಾಡಬೇಕಾಗುತ್ತದೆ. ಪೌಲನು ಯೆರೂಸಲೇಮಿಗೆ ಹೋಗಿ ಬೇಡಿಗಳಿಗೆ ಒಳಗಾಗುವದರಲ್ಲಿ, ದೇವರ ಯಾವ ಚಿತ್ತಗಳು ಅದರಲ್ಲಿ ಅಡಕವಾಗಿರಬಹುದು? ಎರಡು ಉದ್ದೇಶಗಳನ್ನು ನಾನು ನೀಡುತ್ತೇನೆ:

ಮೊದಲನೆಯದಾಗಿ, ಅನೇಕ ದಿವಸಗಳ ಹಿಂದೆ ಪೇತ್ರನಿಗೆ ಮಾಡಿದ ವಾಗ್ದನದಂತೆ ಅದರ ನೆರವೇರಿಕೆಗಾಗಿ (ಅಪಾಯವಿದ್ದರೂ) ಪೌಲನು ಯೆರೂಸಲೇಮಿಗೆ ಹೋಗುವ ಅನಿವಾರ್ಯತೆಯಿತ್ತು. "ಬಡವರನ್ನು ನೆನಪು ಮಾಡಬೇಕೆಂದು" ಪೇತ್ರನು ಪೌಲನಿಗೆ ತಿಳಿಸಿದ್ದನು (ಅಂದರೆ ಯೆರೂಸಲೇಮಿನ ಹಾಗೂ ಯುದಾಯದ ಬಡವರು), ಪೌಲನು ಅದನ್ನು ಮಾಡುವೆನೆಂದು ವಾಗ್ದಾನ ಮಾಡಿದ್ದನು (ಗಲಾತ್ಯ 2:10). ಅನೇಕ ದಿವಸಗಳಾದ ನಂತರವೂ ಪೌಲನು ಆ ಮಾತನ್ನು ನೆನಪಿನಲ್ಲಿಟ್ಟಿದ್ದನು. ಅನಾಯಾಸವಾಗಿ[46] ಆ ಕಾಣಿಕೆಗಳನ್ನು ಅಲ್ಲಿಗೆ ತಲುಪಿಸುವದು ತೃಪ್ತಿಕರವಾದ ನಿರ್ಣಯವಾಗಿರಲಿಲ್ಲ. ಸಹೋದರರ ನಡುವಿನ *ಸಮಾಧಾನದ* ಸಂಬಂಧಕ್ಕಾಗಿ ಪೌಲನು ಯಾವುದೇ ವಿಧವಾದ ಅಪಾಯಕ್ಕೆ ಒಳಗಾಗಲು

ತೀರ್ಮಾನಿಸಿದ್ದನು.

ಎರಡನೆಯದಾಗಿ, ಪೌಲನು ಸೆರಮನೆಗೆ ಹೋಗುವ ಅಗತ್ಯತೆಯಿತು. (ಬಂದಿಸಲ್ಪಡುವದು), ಇಪ್ಪತ್ತು ವರ್ಷಗಳ ಹಿಂದೆ ಅವನು ಹೊಂದಿದ್ದ ಪ್ರವಾದನೆಗೆ ಅನುಗುಣ ವಾಗಿತ್ತು. ಪೌಲನ ಪರಿವರ್ತನೆಯ ನಂತರ, ಯೇಸು ಅವನಿಗೆ, "ನೀನು ಹೋಗು; ಆ ಮನುಷ್ಯನು ಅನ್ಯಜನರಿಗೂ *ಅರಸುಗಳಿಗೂ* ಇಸ್ರಾಯೇಲ್ಯರಿಗೂ ನನ್ನ ಹೆಸರನ್ನು ತಿಳಿಸುವದಕ್ಕಾಗಿ ನಾನು ಆರಿಸಿಕೊಂಡ ಸಾಧನವಾಗಿದ್ದಾನೆ" (ಅಪೊಸ್ತಲರ ಕೃತ್ಯಗಳು 9:15; ಒತ್ತಿ ಹೇಳಿದ್ದು ನನ್ನದು). ಇಪ್ಪತ್ತು ವರ್ಷಗಳಲ್ಲಿ ಪೌಲನು ಸಾವಿರಾರು ಅನ್ಯರಿಗೆ ಸಾಕ್ಷಿ ಹೇಳಿದ್ದನೇ ವಿನಃ ಯಾವುದೇ ಅರಸುಗಳಿಗೆ ಸುವಾರ್ತೆಯನ್ನು ತಿಳಿಸಿರಲಿಲ್ಲ. ಆ ವಾಗ್ದಾನವು ನೆರವೇರುವ ಸಾಧ್ಯತೆಯಾದರು ಹೇಗಿತ್ತು? ಯಾವುದೇ ಅರಸರು ಪೌಲನ ಬಳಿಗೆ ಬಂದು ಅಥವಾ ತಮ್ಮ ಬಳಿಗೇ ಅವರನ್ನು ಕರೆಸಿ ಸುವಾರ್ತೆಯನ್ನು ಕೇಳುವ ಸಾಧ್ಯತೆಯಿತ್ತು. ಯೇಸುವಿನ ವಾಗ್ದಾನವು ನೇರವೇರುವ ಹಾಗೆ ದೇವರು ಯಾವ ವಿಧವಾದ ಏರ್ಪಾಟನ್ನು ಮಾಡಿದನು? ಪೌಲನು ಬಂದನಕ್ಕೊಳಗಾಗುವ ನಿಮಿತ್ತ ಈ ವಾಗ್ದಾನ ನೆರವೇರಿತ್ತು. ಮುಂದಿನ ಪಾಠದಲ್ಲಿ, ದೇವರ ನೇಮಕನ್ನು ನೆರವೇರಿಸುವ ಹಾಗೆ ಪೌಲನು ಪ್ರಸಂಗ ಮಾಡಿದ ವಿಧವನ್ನು ನೋಡಲಿದ್ದೇವೆ! ದೇವರ ಮಾರ್ಗಗಳು ಅದ್ಭುತವಲ್ಲವೇ?

## ಯೆರೂಸಲೇಮಿನ ಪ್ರಯಾಣ (21:15-17)

"ಆ ದಿವಸಗಳಾದ ಮೇಲೆ" [ಕೈಸರೈಯ ದುಃಖದ ಬೀಳ್ಕೊಡುಗೆ ಆದ ನಂತರ] ಸೇರಿಸಿಕೊಂಡು ಯೆರೂಸಲೇಮಿಗೆ ಹೊರಟೆವು. ಎಂದು ವಚನ 15ರಲ್ಲಿ ಲೂಕನು ಉಲ್ಲೇಖಿ ಸಿರುವನು. "ಸೇರಿಸಿಕೊಂಡರು" ಅಂದರೆ ಗ್ರೀಕ್‌ನಲ್ಲಿ "ತಮ್ಮ ಸರಂಜಾಮುಗಳನ್ನು" ಸಿದ್ಧಪಡಿಸಿಕೊಂಡರು ಎಂಬ ಅರ್ಥವಾಗಿದೆ, ಅಥವಾ ಲೂಕ ಮತ್ತು ಅವನ ಸಂಗಡಿಗರೂ ಸಹ ಮುಂದೆ ಸಂಭವಿಸಲಿರುವ ಘಟನೆಯನ್ನು ಎದುರಿಸಲು ಸಿದ್ಧರಾದರು; ಎಂಬ ಸೂಚನೆಯೂ ಇದರಲ್ಲಿ ಅಡಕವಾಗಿದೆ.

ಕೈಸರೈಯದ ಕೆಲವರು ಸಹ ಅವರ ಸಂಗಡ ಹೋದರು ಎಂಬುದಾಗಿದೆ (ವಚನ 16ಎ). ಅವರಲ್ಲಿ ಕೆಲವು ಯೆಹೂದ್ಯರು ಸಹ ಹಬ್ಬದ ನಿಮಿತ್ತ ಅವರ ಸಂಗಡ ಹೋಗಿರಬಹುದು, ಮತ್ತು ಆದಿ ಶಿಷ್ಯರಲ್ಲಿ[47] ಒಬ್ಬನಾದ ಕುಪ್ರದೇಶದ[48] ಮ್ನಾಸೋನನ ಮನೆಗೆ ಕರೆದುಕೊಂಡು ಹೋದರು (ವಚನ 16ಬಿ).[49] ಹಬ್ಬದ ಸಮಯದಲ್ಲಿ ನೂರಾರು ಯೆಹೂದ್ಯರು ಯೆರೂಸಲೇ ಮಿಗೆ ಬರುವವರಾಗಿದದ್ದರಿಂದ, ಇಳುಕೊಳ್ಳಲು ಸ್ಥಳದ ಅಭಾವ ಉಂಟಾಗುತ್ತಿತು. ಮತ್ತು ಯೆರೂಸಲೇಮಿನಲ್ಲಿ ಪ್ರಖ್ಯಾತವಲ್ಲದ ಒಬ್ಬ ಮನುಷ್ಯನು ಮತ್ತು ಅವನ ಸಂಗಡ (21:20-22, 27, 28), ಏಳು ಜನ ಅನ್ಯರಿಗೆ[50] ಸ್ಥಳದ ಅಭಾವ ಇನ್ನು ಅಧಿಕವಾಗಿರಬಹುದು. ಪೌಲ ಮತ್ತು ಅವನ ಸಂಗಡಿಗರಿಗೆ ಅತಿಥ್ಯ ನೀಡಲು ಮ್ನಾಸೋನನ ಮನ ಹಾಗು ಮನೆ ಬಹಳ ದೊಡ್ಡದಾಗಿತ್ತು.[51] ಆಗ ಅವರು ಯೆರೂಸಲೇಮಿಗೆ ಬಂದರು (ವಚನ 17).

ಅನೇಕ ವಿವರಣೆಕಾರರು, ಯೇಸು ಯೆರೂಸಲೇಮಿಗೆ ಪ್ರವೇಶ ಮಾಡಿದ ಸನ್ನಿವೇಶ ವನ್ನು ಹಾಗೂ ಪೌಲನು ಯೆರೂಸಲೇಮಿಗೆ ಪ್ರವೇಶ ಮಾಡಿದ ಸನ್ನಿವೇಶವನ್ನು ಹೋಲಿಕೆ ಮಾಡಿದ್ದಾರೆ. ಲೂಕ 9:51ರಲ್ಲಿ, ಯೇಸುವಿನ ಕುರಿತು: "ಯೇಸು ಯೆರೂಸಲೇಮಿಗೆ ... ಹೋಗುವದಕ್ಕೆ ಮನಸ್ಸನ್ನು ದೃಢಮಾಡಿಕೊಂಡು, ಸಂಕಟ ಸಂಭವಿಸುವದಕ್ಕಿದ್ದರೂ, ಯೆರೂಸಲೇಮಿಗೆ ಹೋದನು."[52] (ಲೂಕ 18:31-33), ಯೆರೂಸಲೇಮಿಗೆ ಸಿದ್ದನಾಗಿ ಹೋದನು ಅವನು ಹಿಂತಿರುಗಿ ನೋಡಲಿಲ್ಲ.

## ಮುಕ್ತಾಯ

ದೇವರ ಚಿತ್ತವನ್ನು ಈಡೇರಿಸುವದು ಕೆಲವು ಸಾರಿ ಕಷ್ಟಕರವೇ. ಯೇಸು ಸುಲಭ

ವಾದ ನಕ್ಷೆಯನ್ನು ನೀಡುವದಿಲ್ಲ. ಕ್ರೈಸ್ತತ್ವವು ಬಲಹೀನ ಹೃದಯಿಗಳಿಗೆ ಸಂಬಂಧವನ್ನು ಹೊಂದಿರುವದಿಲ್ಲ. ಕೆಲವು ಉದ್ವೇಗದ - ಪ್ರಸಂಗಿಗಳು ಮಾನವ ನಿರ್ಮಿತ ಅಪಾಯಗಳನ್ನು ಎದುರಿಸುವರು, ಆದರೆ ದೇವರಿಗಾಗಿ ಅಪಾಯಗಳನ್ನು ಎದುರಿಸುವವರು, ಅಂತ್ಯದಲ್ಲಿ ಅದನ್ನು ಅಪಾಯವೆಂಬುದಾಗಿ ಪರಿಗಣಿಸುವದಿಲ್ಲ - ಯಾಕಂದರೆ ದೇವರು ನಮ್ಮನ್ನು ಎಂದಿಗೂ ಕೈ ಬಿಡದೆ - ನಮ್ಮ ಹಿನ್ನೆಲೆಯಲ್ಲಿ ತಾನೇ ಕಾರ್ಯ ನಿರ್ವಹಿಸುತ್ತಾನೆ. ನಾವು ಈ ಕುರಿತು ಓದುವಂತೆ,

> ನಿಮಗಿರುವವುಗಳಲ್ಲಿ ತೃಪ್ತರಾಗಿರಿ; ನಾನು ನಿನ್ನನ್ನು ಎಂದಿಗೂ ಕೈ ಬಿಡುವದಿಲ್ಲ, ಎಂದಿಗೂ ತೊರೆಯುವದಿಲ್ಲವೆಂದು ದೇವರು ತಾನೇ ಹೇಳಿದ್ದಾನೆ. ಆದದರಿಂದ - ಕರ್ತನು ನನ್ನ ಸಹಾಯಕನು, ಭಯಪಡೆನು, ಮನುಷ್ಯನು ನನಗೆ ಏನು ಮಾಡಾನು? ಎಂದು ನಾವು ಧೈರ್ಯವಾಗಿ ಹೇಳಬಲ್ಲೆವು (ಇಬ್ರಿಯ 13:5, 6).

> ಇದಲ್ಲದೆ ದೇವರ ಸಂಕಲ್ಪದ ಮೇರೆಗೆ ಕರೆಯಲ್ಪಟ್ಟು ಆತನನ್ನು ಪ್ರೀತಿಸುವವರ ಹಿತಕ್ಕಾಗಿ ಎಲ್ಲಾ ಕಾರ್ಯಗಳು ಅನುಕೂಲವಾಗುತ್ತವೆ ಎಂದು ನಮಗೆ ಗೊತ್ತದೆ (ರೋಮಾಪುರ 8:28).

ಪೌಲನಿಗೆ ಆದಂತೆ, ನಿಮ್ಮ ಜೀವಕ್ಕೆ ಜೀವ ಭಯ ಉಂಟಾದರೂ, ನಿರ್ಭಯವಾಗಿ ನೀವು ಮರಣವನ್ನು ಎದುರಿಸಬಹುದು, "ನಮ್ಮ ಕರ್ತನು ರಕ್ಷಕನೂ ಆಗಿರುವ ಯೇಸು ಕ್ರಿಸ್ತನ ನಿತ್ಯ ರಾಜ್ಯದಲ್ಲಿ ಪ್ರವೇಶಿಸುವ ಹಾಗೆ ದೇವರು ನಿಮಗೆ ಧಾರಳವಾಗಿ ಅನುಗ್ರಹಿಸುವನು" (2 ಪೇತ್ರ 1:11; NIV) ನೀವು ನಂಬಿಗಸ್ತರಾದ ಕ್ರೈಸ್ತರಾಗಿದ್ದರೆ, ಏನನ್ನೂ ಕಳಕೊಳ್ಳುವದಿಲ್ಲ.

ಮನುಷ್ಯನು ತೆಗೆದು ಕೊಳ್ಳಬಹುದಾದ ಅಪಾಯ ಯಾವುದು ಎಂದು ತಿಳಿದಿರುವಿರಾ? ಅದು ದೇವರಿಗೆ ವಿಧೇಯರಾಗುವ ನಿರಾಕರಣೆಯೇ! ನಿಮ್ಮಲ್ಲಿ ಕೆಲವರು ಯೇಸುವನ್ನು ಅರಿಕೆಮಾಡಿ, ದೀಕ್ಷಾಸ್ನಾನ ಮಾಡಿಸಿಕೊಳ್ಳಬೇಕೆಂಬುದು ದೇವರ ಇಚ್ಛೆಯಾಗಿರುತ್ತದೆ - ಆದರೆ ನಿಮ್ಮ ಸ್ನೇಹಿತರು ಅದಕ್ಕೆ ವಿರುದ್ಧವಾಗಿ ಮಾತನಾಡಿ, ನಿಮ್ಮನ್ನು ಆ ಯೋಚನೆಯಿಂದ ದೂರ ಸರಿಸಬಹುದು, ಪೌಲನ ಸ್ನೇಹಿತರು ಅವನು ಯೆರೂಸಲೇಮಿಗೆ ಹೋಗದಂತೆ ತಡೆದ ಹಾಗೆ ನಿಮ್ಮ ಸ್ನೇಹಿತರು ನಿಮಗೂ ಮಾಡಬಹುದು. ನಿಮ್ಮ ಜೀವಿತ ದಲ್ಲಿರುವ ದೇವರ ಚಿತ್ತವನ್ನು ತೆಗೆದು ಹಾಕುವಂಥ ಮಾತುಗಳನ್ನು ನಿಮಗೆ ಯಾರು ಮಾತನಾಡದೆ ಇರಲಿ! ಅಮರವಾದ ನಿಮ್ಮ ಆತ್ಮಕ್ಕೆ ಅಡ್ಡಿ ತಂದುಕೊಳ್ಳಬೇಡಿರಿ! ಈ ದಿನವೇ ಕರ್ತನಿಗೆ ವಿಧೇಯರಾಗಿರಿ.

## ದೃಷ್ಯ ಸಂಬಂಧವಾದ – ಟಿಪ್ಪಣಿ

ಈ ಪಾಠವನ್ನು ವಿವರಿಸಲು, ಒಂದು ಅಗಲವಾದ ಸೊಂಟ ಪಟ್ಟಿಯನ್ನು ತೆಗೆದುಕೊಳ್ಳಿರಿ. ನಂತರ ಅದನ್ನು ನಿಮ್ಮ ಕೇಳುಗರಿಗೆ ತೋರಿಸಿ, ದೊಡ್ಡವರಿಗೆ ಇದು ಸೊಂಟಪಟ್ಟಿ, ಚಿಕ್ಕವರಿಗೆ ಭಯಪಡಿಸುವ ಸಾಧನ ಆದರೆ ಪೌಲನಿಗೆ ಸೆರೆಮನೆ ವಾಸದ ಸಂಕೇತವಾಗಿತ್ತು! ಅಗಬನು ಅದನ್ನು ಬಳಸಿದ ಪರಿಯನ್ನು ಪ್ರಾಯೋಜಿ ಸಿರಿ.

## ಪ್ರಸಂಗದ ಟಿಪ್ಪಣಿ

ನೀನು ಯಾವುದಕ್ಕಾಗಿ ಸಾಯುವಿ? ಎಂಬ *ಅಪೊಸ್ತಲರ ಕೃತ್ಯಗಳು, 2ನೇ* ಪುಸ್ತಕದ ತಲೇಬರಹವನ್ನು ಬಳಸದೇ ಇದ್ದರೆ, ಈ ಪಾಠಕ್ಕೆ ಅನುಗುಣವಾಗುವಂತೆ ಆದರೆ ಪೌಲನ ಸಹೋದರರ ನಡುವೆ ಸಮಾಧಾನ ಉಂಟುಮಾಡುವ ಸಮವಾಗಿ ಪ್ರಾಣವನ್ನು ಅರ್ಪಿಸಲು

ಸಿದ್ಧವಾಗಿದ್ದನು. ನೀವು ಯಾತಕ್ಕಾಗಿ ಪ್ರಾಣ ನೀಡಲು ಇಚ್ಛಿಸುವಿರಿ? ಎಂಬ ಪ್ರಶ್ನೆಯನ್ನು ನಿಮ್ಮ ಓದುಗರಿಗೆ ಕೇಳಿರಿ.

---

ಟಿಪ್ಪಣಿಗಳು

[1]ಅಪೊಸ್ತಲರ ಕೃತ್ಯಗಳು 19:21 ಹಾಗೂ 20:22ರ ಟಿಪ್ಪಣಿ ನೋಡಿರಿ. *ಅಪೊಸ್ತಲರ ಕೃತ್ಯಗಳು, 4ನೇ* ಪ್ರಸಂಗಿಗಳಿಗೂ ಎಂಬ ಪಾಠವನ್ನು ನೋಡಿರಿ. [2]ಪೌಲನನ್ನು ಮುಗ್ಧ ಹೃದಯವುಳ್ಳವನು ಎಂದು ಕೆಲವರು ತಿಳಿಸಿರುವರು. [3]*ಅಪೊಸ್ತಲರ ಕೃತ್ಯಗಳು, 4ನೇ* "ಮೂರನೆ ಪ್ರಯಾಣದ ನಕ್ಷೆಯನ್ನು ನೋಡಿರಿ. [4]ಪೌಲನು ಸಂದರ್ಶಿಸುವ ಮುನ್ನ ಭೂಕಂಪವು ಉಂಟಾಗಿ, ಆ ಪ್ರತಿಮೆಯು ಮುರಿದು ಅದರ ಉಳಿದ ಭಾಗವು ಇನ್ನೂ ಆಕರ್ಷಕವಾಗಿತ್ತು. [5]ಅಪೊಸ್ತಲರ ಕೃತ್ಯಗಳು 20:16ರ ಟಿಪ್ಪಣಿ ನೋಡಿರಿ. [6]ಅವರು ಈ ಹಿಂದೆ ಪ್ರಯಾಣಿಸಿದ್ದ ಹಡಗಿಗಿಂತಲೂ ಇದು ದೊಡ್ಡದ್ದಾಗಿತ್ತು. ಸರಕನ್ನು ಇಳಿಸಲು 7 ದಿನಗಳ ಕಾಲ ಹಿಡಿಯಿತು (ವಚನಗಳು 3-6). [7]ಪೌಲನ ಮೂರನೇ ಪ್ರಯಾಣದ ನಕ್ಷೆಯನ್ನು *ಅಪೋಸ್ತಲರ ಕೃತ್ಯಗಳು, 4ನೇ* ಪುಸ್ತಕದಲ್ಲಿ ನೋಡಿರಿ. [8]ವಚನ 3ರಲ್ಲಿ ಅವರು "ಸಿರಿಯಕ್ಕೆ ಪ್ರಯಾಣಿಸಿದರು" ಎಂದು ಲೂಕನು ತಿಳಿಸಿರುವನು. ಫೋಯಿ ನೀಕೆಯು ರೋಮಾ ಆಡಳಿತದ ಒಂದು ಸಂಸ್ಥಾನವಾಗಿತ್ತು. [9]ತೂರ್‌ನ ಕುರಿತು ಹಳೆ ಒಡಂಬಡಿಕೆಯ ಯೆಶಾಯ 23; ಯೆಹೆಜ್ಕೇಲ 26-28; ಆಮೋಸ್ 1:9, 10ನ್ನು ನೋಡಿರಿ. [10]ಬಾರ್ನಬ ಪೌಲರು ಸಿರಿಯದ ಅಂತಿಯೋಕ್ಯದಿಂದ ಯೆರೂಸಲೇಮಿಗೆ ಕಾಣಿಕೆಗಳನ್ನು ಒಯ್ಯುವಾಗ ತೂರಿನ ಸಹೋದರರನ್ನು ಸಂದಿಸಿರಬಹುದು (11:27-30; 12:25).

[11]ಈ ಸಮಯದಿಂದ ಪೌಲನು ಆತುರ ಪಡಲಿಲ್ಲ, ನಿಮ್ಮ ಕೆಲಸದ ಆತುರತೆಯನ್ನು ನಿದರ್ಶಿಸಬಹುದು. [12]"ಮೇಲೆ ನೋಡಿದನು" ಅಂದರೆ ಗ್ರೀಕ್‌ನಲ್ಲಿ "ಸೂಕ್ಷ್ಮವಾಗಿ ಹುಡುಕಿದನು" ಎಂಬ ಅರ್ಥ ತೂರ್ ದೊಡ್ಡಪಟ್ಟಣವಾಗಿದ್ದು, ಸಭೆಯು ಚಿಕ್ಕದಾಗಿರಬಹುದು. [13]ತೂರ್‌ನಲ್ಲಿ ಒಂದು ವಾರ ಇರುವಾಗ, ವಾರದ ಮೊದಲನೆಯ ದಿನ ಅವರು ರೊಟ್ಟಿ ಮುರಿಯುವದಕ್ಕಾಗಿ ಸೇರಿಸಬಹುದು (20:7ರ ಟಿಪ್ಪಣಿ ನೋಡಿರಿ). [14]*ಅಪೊಸ್ತಲರ ಕೃತ್ಯಗಳು, 4ನೇ* 19:21 ಮತ್ತು ಅಪೊಸ್ತಲರ ಕೃತ್ಯಗಳು 20:22ರ ಟಿಪ್ಪಣಿ ನೋಡಿರಿ. [15]ವಚನ 11ರ ಆತ್ಮದ ನಿಖರವಾದ ಪದವನ್ನು ನೋಡಿರಿ, ಏನಾಗ ಬಹುದೆಂದು ತಿಳಿಸಿದರೂ, ಯೆರುಸಲೇಮಿಗೆ ಹೋಗದಂತೆ ಸೂಚನೆ ನೀಡಲಿಲ್ಲ. [16]ಅನೇಕ ದಿವಸಗಳ ನಂತರ ಕ್ರೈಸ್ತರ ಸಂಸರ್ಗದಲ್ಲಿರುವವರು - ಬೀಳ್ಕೊಡಲ್ಪಡುವಾಗ ಉಂಟಾಗುವ ಅವರ ದುಃಖವನ್ನು ವಿವರಿಸಿರಿ. [17]ಸಭಾ ವಿಚಾರದಲ್ಲಿ ಮಕ್ಕಳ ಕುರಿತು ಮೊದಲ ಬಾರಿ ಉಲ್ಲೇಖಿಸಲಾಗಿದೆ. [18]*ಅಪೊಸ್ತಲರ ಕೃತ್ಯಗಳು, 4ನೇ* 20:36ರ ಟಿಪ್ಪಣಿ ನೋಡಿರಿ. [19]"ನದಿ ತೀರದ ಪ್ರಾರ್ಥನಾ ಕೂಟ ಎನ್ನಲಾಗಿದೆ." [20]ಇಲ್ಲಿ ಏಕಾಂಗಿತನದ ಸೂಚನೆಯಿದೆ - ಅದಕ್ಕನುಗುಣವಾಗಿ: ಅಪಾಯದ ಮುನ್ಸೂಚನೆಯಿದ್ದರೂ, ಸಮುದ್ರ ಪ್ರಯಾಣ ಮಾಡಿ ಸುರಕ್ಷಿತವಾಗಿ ಹಿಂದಿರುಗಿದರು.

[21]*ಅಪೊಸ್ತಲರ ಕೃತ್ಯಗಳು, 4ನೇ* "ಮೂರನೇ ಪ್ರಯಾಣದ ನಕ್ಷೆ ನೋಡಿರಿ." [22]ಪಿಸಿದ್ಯದ ಅಂತಿಯೋಕ್ಯ, ಲುಸ್ತ್ರ, ತ್ರೋವ, ಫಿಲಿಪ್ಪಿ, ಕೊರಿಂಥ, ಹಾಗೂ ಪ್ತೊಲೆಮಾಯವು ರೋಮಾಯದ 6 ಸಂಸ್ಥಾನಗಳು, ಅವುಗಳಲ್ಲಿ ಕೆಲವನ್ನು ಕಲಿತಿರುವೆವು. [23]KJV ಯಲ್ಲಿ "ಅಕ್ಟೋ" ಎಂಬುದಾಗಿದೆ. [24]ಹಡಗು ಪ್ತೊಲೆಮಾಯದವರೆಗೂ ಹೋಯಿತು. ನಂತರ ಅವರು ಕಲ್ಲಡಿಗೆಯಲ್ಲಿ ಹೋದರು. [25]ಪೌಲನು ಈ ಸಹೋದರರನ್ನು "ಕಣ್ಣೆತ್ತಿ ನೋಡಲಿಲ್ಲ" ಪೌಲ ಮತ್ತು ಸಂಗಡಿಗರು ತೂರ್‌ನಲ್ಲಿ ಇರುವಾಗ, ಅವರ ವರ್ತಮಾನವು ಪ್ತೊಲೆಮಾಯಕ್ಕೆ ಹೋಯಿತು. [26]*ಅಪೊಸ್ತಲರ ಕೃತ್ಯಗಳು, 4ನೇ* 20:4ರ ಟಿಪ್ಪಣಿ ನೋಡಿರಿ. [27]"ಅತಿಥಿಸತ್ಕಾರವು" ಸಂಸ್ಕೃತಿಗನುಗುಣವಾಗಿ ಬದಲಾಗುತ್ತದೆ. ಅದು ಭಾರವಲ್ಲ. ಸಹ ಕ್ರೈಸ್ತರು ಅಬಾರವನ್ನು ನೀಡಬಾರದು (ಜ್ಞಾನೋಕ್ತಿ 25:17), ಆದರೆ ಕ್ರೈಸ್ತರು ಅತಿಥಿ ಸತ್ಕಾರ ಮಾಡಬೇಕು (ಇಬ್ರಿಯ 13:2). [28]ಪೌಲನ ಮೂರನೆ ಪ್ರಯಾಣದ ನಕ್ಷೆಯನ್ನು *ಅಪೋಸ್ತಲರ ಕೃತ್ಯಗಳು, 4ನೇ* ಪುಸ್ತಕದಲ್ಲಿ ನೋಡಿರಿ. [29]*ಅಪೊಸ್ತಲರ ಕೃತ್ಯಗಳು, 2ನೇ* 10:1ರ ಟಿಪ್ಪಣಿ ನೋಡಿರಿ. [30]ಸಿರಿಯದ ಅಂತಿಯೋಕ್ಯದಿಂದ ಯೆರೂಸಲೇಮಿಗೆ ಹಿಂದಿರುಗುವಾಗ, ಪೌಲನು ಕೈಸರೈಯನ್ನು ಸಂಧಿಸಿರಬಹುದು (9:30; 18:22).

[31]"ಕೆಲವು ದಿನಗಳು" ಎಂದು ಲೂಕನು ತಿಳಿಸಿರುವನು. 6 ರಿಂದ 10 ದಿನಗಳಿರ ಬಹುದು. [32]ಅಪೊಸ್ತಲರ ಕೃತ್ಯಗಳು 6ರಲ್ಲಿರುವ ಏಳು ಜನರನ್ನು ಮೊದಲ "ಡೀಕನ್ಸ್" ಎಂದು ಕೆಲವರು ಕರೆದಿರುವರು. [33]ನಾನು ಚಿಕ್ಕವನಿರುವಾಗ ಪರ ಸ್ಥಳಗಳಿಗೆ ಹೋಗುವ ಸೇವಕರನ್ನು "ಸೌವಾರ್ತಿಕರು" ಎಂದು ಸಂಬೋಧಿಸುತ್ತಿದ್ದರು - ಒಂದು ಸ್ಥಳ ಅವನನ್ನು ಸೌವಾರ್ತಿಕನು ಎಂದು

ಕರೆದರು. [34]"ಸ್ನಾನಿಕನಾದ ಯೋಹಾನನು" "ಚರ್ಮಕಾರನಾದ ಸೀಮೋನನು" ಎಂಬುದನ್ನು ಹೋಲಿಸಿ. [35]ಪೂರ್ಣಾವಧಿ ಸುವಾರ್ತೆ ಸಾರುವವರಿಗೆ "ಸೌವಾರ್ತಿಕನು" ಎಂಬದು ಮೆಚ್ಚತಕ್ಕದ್ದೆ. "ಪ್ರಸಂಗಿಗೂ" "ಸೇವಕನು" ಎನ್ನುವದಕ್ಕೂ ವ್ಯತ್ಯಾಸವನ್ನು ನಾನು ಕಾಣುತ್ತೇನೆ. [36]ಅವರು ಕನ್ಯೆಯರು ಎಂಬುದರಲ್ಲಿ ಲೂಕನು ಅವರು ಪರಿಶುದ್ಧರು ಎಂಬ ಸೂಚನೆಯನ್ನು ಲೂಕನು ನೀಡಿರುವದಿಲ್ಲ. "ಅವರುಗಳು ಮೊದಲ" ನನ್ಸ್ ಆಗಿರಲಿಲ್ಲ. [37]*ಅಪೊಸ್ತಲರ ಕೃತ್ಯಗಳು, 1ನೇ* "ಪ್ರವಾದನೆ" ಎಂಬುದನ್ನು ನೋಡಿರಿ. [38]1 ತಿಮೊಥೆ 2:12 ನೋಡಿರಿ. [39]ಲೂಕನು ಟಿಪ್ಪಣಿಯಲ್ಲಿ "ಸಾಕ್ಷಿ" ಎಂದು ತಿಳಿಸಿರಬಹುದು. [40]ಲೂಕನ ಪೌಲನೊಂದಿಗೆ ರೋಮಾಯದಲ್ಲಿ ಇದ್ದದ್ದರಿಂದ, ಪೌಲನ ಸೆರೆಮನೆವಾಸದ ಸಮಯದಲ್ಲಿ ಲೂಕನು ಪಾಲಿಸ್ತೇನಿನಲ್ಲಿ ವಾಸಿಸಿರಬಹುದು, ಆದ್ದರಿಂದ ಅವನು ಕ್ರೈಸರೈಯದ ಒಳಗೆ ಅಥವಾ ಹೊರಗೆ ವಾಸಿಸಿರಬಹುದು.

[41]ಹಳೇ ಒಡಂಬಡಕೆಯ ನಿದರ್ಶನಗಳಿಗಾಗಿ, 1 ಅರಸು 11:29-31; 22:11; ಯೆಶಾಯ 20:2-4; ಯೆರೆಮೀಯ 13:1-11; 27:1-11; 28:1-17; ಯೆಹೆಜ್ಕೇಲ 4; 5:1-4; ಜೆಕರ್ಯ 11:7-14 ನೋಡಿರಿ. [42]KJV ಯಲ್ಲಿ "ನಡುಪಟ್ಟಿ" ಅಥವಾ ಬಟ್ಟೆಯ ಪಟ್ಟಿ, ದೇಹದ ಹೊರಗಿನ ಬಟ್ಟೆಯನ್ನು ಭದ್ರಪಡಿಸಲು ಬಳಸುತ್ತಿದ್ದರು. [43]ಪೌಲನು ಯೆರೂಸಲೇಮಿನಲ್ಲಿ ಮರಣಿಸಲಿಲ್ಲ, ದೇವರ ಚಿತ್ತವಿದ್ದರೆ ಅದು ಸಾಧ್ಯವಿತ್ತು. ಈ ವಿಧದ ಹೇಳಿಕೆಗಾಗಿ ಎಸ್ತೇರ್ 4:16 ನೋಡಿರಿ. [44]ಸ್ನೇಹಿತರ ಸಲಹೆಯನ್ನು ನಿರಾಕರಿಸಿರಿ ಎಂದು ನಾನು ಹೇಳುತ್ತಿಲ್ಲ (ಜ್ಞಾನೋಕ್ತಿ 24:6). ಮುಖ್ಯವಾಗಿ ಕ್ರೈಸ್ತ ಸ್ನೇಹಿತರ ಸಲಹೆ. ಪೌಲನು ಆಗಾಗ್ಗೆ ಕ್ರೈಸ್ತ ಸ್ನೇಹಿತರ ಸಲಹೆಯನ್ನು ಸ್ವೀಕಾರ ಮಾಡಿದ್ದನು. ಅಪಾಯದ ಸಮಯದಲ್ಲಿ ಅವನು ದೂರವಿರುವಂತೆ ಅವರು ಸಲಹೆ ನೀಡಿದ್ದರು (ಉದಾಹರಣೆ 19:30, 31). ಈ ಸನ್ನಿವೇಶದಲ್ಲಿ ದೇವರಿಗೆ ಅವಿಧೇಯ ನಾಗುವ ಸಲಹೆಯಾಗಿತ್ತು, ದೇವರಿಗೆ ಇಷ್ಟವಿಲ್ಲದ್ದನ್ನು ಮಾತನಾಡುವದು. [45]ಅಪೊಸ್ತಲರ ಕೃತ್ಯಗಳು 18:21ರ ಮೇಲಿರುವ ಸೂಚನೆಗಳಿಗೆ "ಸಹೋದರರನ್ನು ಬಲಪಡಿಸುವುದು ಹೇಗೆ" ಪಾಠವನ್ನು *ಅಪೊಸ್ತಲರ ಕೃತ್ಯಗಳು, 4ನೇ* ಪುಸ್ತಕದಲ್ಲಿ ನೋಡಿರಿ. [46]ಇನ್ನೊಬ್ಬರು ಆರಂಭಮಾಡಿ, ಮತ್ತೊಬ್ಬರು ಪೂರ್ಣಮಾಡಿದ ಕೆಲಸದ ಬಗ್ಗೆ ಉದಾಹರಣೆ ನೀಡಿರಿ ಯಶಸ್ವಿಯು ಮೆಚ್ಚತಕ್ಕದ್ದಾಗಿರುವದಿಲ್ಲ. ಯಾಕೆಂದರೆ ಕೆಲಸ ಪೂರ್ಣ ಮಾಡುವ ಮನಸ್ಸು ಅವರಿಗಿರುವದಿಲ್ಲ. [47]ಕುಪ್ರವು ದ್ವೀಪವಾಗಿತ್ತು, ಪೌಲ ಬಾರ್ನಬರು ತಮ್ಮ ಮೊದಲ ಸೇವಾ ಪ್ರಯಾಣವನ್ನು ಅಲ್ಲಿಂದಲೇ ಆರಂಭ ಮಾಡಿದ್ದರು. ಪಾಲಿಸ್ತೇನಿನ ಯೆಹೂದ್ಯರಿಗಿಂತಲೂ, ಹೆಲೆನೆಸ್ಟಿಕ್ ಯೊದ್ಯರು ಅವರನ್ನು ಆಹ್ವಾನಿಸಿದ್ದರು. [48]ಮ್ನಾಸೋನನ ಕುರಿತು ಈ ಒಂದು ಸ್ಥಳದಲ್ಲಿ ಮಾತ್ರ ಉಲ್ಲೇಖಿಸಲಾಗಿದೆ. ಅವನನ್ನು ಆದಿ ಶಿಷ್ಯನೆಂದು ಕರೆಯಲಾಗಿದೆ. ಅವನು ಯೆರೂಸಲೇಮಿನ ಪ್ರಥಮ ಸಭೆಯ ಆರಂಭದಲ್ಲಿದ್ದವನು ಅವನು ಲೂಕನು ಬರೆದ ಚರಿತ್ರೆಗೆ ಮೂಲವಾಗಿದ್ದನು (ಲೂಕ 1:3) - ಅಥವಾ ಅರದ ನಿರ್ದಿಷ್ಟವಾದ ವಿವರ ಇರುವದಿಲ್ಲ. [49]ಕೈಸರೈಯಲ್ಲಿ ಅವರು ದಿವಸಗಳನ್ನು ಕಳೆಯುವಾಗ, ಈ ಏರ್ಪಾಟು ಮಾಡಿರಬಹುದು (ವಚನ 10) ವಚನ 16ರಲ್ಲಿ ವ್ಯಾಖ್ಯಾನದ ವ್ಯತ್ಯಾಸವಿದೆ. ಮ್ನಾಸೋನನು, ಯೆರೂಸಲೇಮಿನಿಂದ ಕೈಸರೆಗೆ ಬಂದನು, ನಂತರ ಅವರೊಂದಿಗೆ ಯೆರೂಸಲೇಮಿಗೆ ಹಿಂದಿರುಗಿದನು ಎಂಬ ಕೆಲವು ಬರವಣಿಗೆಗಳಿವೆ (KJV) ಯೆರೂಸಲೇಮಿನ ಪ್ರಯಾಣದ ಮಧ್ಯದಲ್ಲಿ ಪ್ರಯಾಣಿಕರು ಮ್ನಾಸೋನನಲ್ಲಿ ತಂಗುತ್ತಿದ್ದರು. ಮುಖ್ಯ ಕಥೆಗೆ ಯಾವ ವ್ಯತ್ಯಾಸಗಳೂ ಇರುವದಿಲ್ಲ. [50]ಅನ್ಯರು ಹಬ್ಬಕ್ಕೆ ಬರುವ ಕುರುಹುಗಳು ಇರುವದಿಲ್ಲ (ಯೋಹಾನ 12:20). ದೇವಾ ಲ ಯದ ಹೊರಾಂಗಣವನ್ನು "ಅನ್ಯರ ಅಂಗಳ" ಎಂದು ಕರೆಯುವರು. ಅ ಅನ್ಯನು ದೇವ ಭಯಹೊಂದಿ ಕ್ರೈಸ್ತ ಯೆಹೂದ್ಯನಾಗಿದಿದ್ದರೆ, ಅವನ ಮೇಲೆ ಸಂದೇಹವಿರುತ್ತಿತ್ತು.

[51]ಪೌಲನ ಅಣ್ಣನ ಮಗನ ಕುರಿತು ತಿಳಿಸಿರುವದರಿಂದ (23:16), ಪೌಲನ ಅಕ್ಕ ಯೆರೂಸಲೇ ಮಿನಲ್ಲಿ ಮನೆಯನ್ನು ಹೊಂದಿರಬಹುದು, ಹಾಗು ಪೌಲನು ಅಲ್ಲಿ ತಂಗಿರಬಹುದು. ಅದರ ಸತ್ಯಾಸತ್ಯಗಳ ವಿವರವಿರುವದಲ್ಲ. [52]ಲೂಕ 9:53; 13:33; 18:31; 19:11, 28.